ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಹುಲಕುಂದ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು
**ಪ್ರಕಾಶ ಗಿರಿಮಲ್ಲನವರ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**HULAKUNDA:** An Introducing Book on the Places in Karnataka that Played a Major Role in the Freedom Struggle, Written by Prakash Girimallanavara, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಪ್ರಕಾಶ ಗಿರಿಮಲ್ಲನವರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೪೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

ವಿ ಸುನಿಲ್ ಕುಮಾರ್

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಈ ವರ್ಷ ಭಾರತಕ್ಕೆ ಸ್ವಾತಂತ್ರ್ಯ ದೊರೆತು ೭೫ ವಸಂತಗಳು ಪೂರ್ಣಗೊಳ್ಳುತ್ತಿವೆ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಸಮಾಜ ಮತ್ತು ವ್ಯಕ್ತಿಗಳು ನಡೆಸಿದ ಚಳುವಳಿ, ವಹಿಸಿದ ಪಾತ್ರಗಳ ಅನ್ವೇಷಣೆ–ಅಧ್ಯಯನ ದೃಷ್ಟಿಯಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸವಿನೆನಪಿನ ಮಾಲೆಯಲ್ಲಿ ೭೫ ಕಿರು ಕೃತಿಗಳನ್ನು ಪ್ರಕಟಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾದುದು.

ಸ್ವಾತಂತ್ರ್ಯ ಹೋರಾಟದ ರೂಪ–ಸ್ವರೂಪ, ಧ್ಯೇಯ ಧೋರಣೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದವು. ಮುಂಬೈ ಮತ್ತು ಮದ್ರಾಸ್ ಪ್ರದೇಶಗಳಲ್ಲಿ ಈ ಹೋರಾಟ ಆಂಗ್ಲರ ವಿರುದ್ಧವಿದ್ದರೆ, ಮೈಸೂರು ಭಾಗದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆ ಮತ್ತು ಪರೋಕ್ಷವಾಗಿ ಭಾರತ ಸ್ವಾತಂತ್ರ್ಯಕ್ಕಾಗಿದ್ದಿತು. ಕಲಬುರ್ಗಿ–ಬೀದರ ಪ್ರದೇಶಗಳಲ್ಲಿ ಹೈದರಾಬಾದ ನಿಜಾಮರ ಸಂಸ್ಥಾನದ ರಜಾಕಾರರ ದಬ್ಬಾಳಿಕೆಯ ವಿರುದ್ಧ ನಡೆದ ಹೋರಾಟವಾಗಿತ್ತು. ರಾಮದುರ್ಗ–ಜಮಖಂಡಿ ಮೊದಲಾದ ಸಂಸ್ಥಾನ ರಾಜ್ಯಗಳಲ್ಲಿ ಸರ್ಕಾರದ ಸ್ಥಾಪನೆ ಮತ್ತು ಭಾರತದ ಒಕ್ಕೂಟದಲ್ಲಿ ಈ ಸಂಸ್ಥಾನಗಳ ವಿಲೀನಿಕರಣದ ಉದ್ದೇಶ ಹೊಂದಿದ್ದಿತು. ಈ ಎಲ್ಲ ಬಗೆಯ ಜನಪರ ಹೋರಾಟಗಳಲ್ಲಿ ಸಮಸ್ತ ಕನ್ನಡಿಗರು ಸಕ್ರಿಯವಾಗಿ ಪಾಲುಗೊಂಡರು. ಸ್ವತಂತ್ರ ಸಂಯುಕ್ತ ಪ್ರಜಾಪ್ರಭುತ್ವ ಮತ್ತು ಧರ್ಮನಿರಪೇಕ್ಷ ಗಣರಾಜ್ಯ ಸ್ಥಾಪನೆ ಮೊದಲಾದ ಗುರಿಗಳ ಸಾಫಲ್ಯತೆಗಾಗಿ ಕನ್ನಡಿಗರು ಕ್ರಿಯಾತ್ಮಕವಾಗಿ ಭಾಗವಹಿಸಿದರು.

ಈ ಹಿನ್ನೆಲೆಯಲ್ಲಿ ಬೆಳಗಾವಿ ಪ್ರದೇಶದ ಪ್ರಮುಖ ಹೋರಾಟ ಕೇಂದ್ರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕಿರು ಕೃತಿಯನ್ನು ರಚಿಸಿರುವೆ. ಸ್ವಾತಂತ್ರ್ಯ ಹೋರಾಟ ಕುರಿತು ಈವರೆಗೆ ಬಂದ ಎಲ್ಲ ಕೃತಿಗಳನ್ನು

ಆಮೂಲಾಗ್ರವಾಗಿ ಪರಿಶೀಲಿಸಿ, ಈ ಕೃತಿ ರಚನೆಗೆ ಆಕರವಾಗಿ ಬಳಸಿಕೊಂಡಿದ್ದೇನೆ. ಆ ಎಲ್ಲ ಲೇಖಕ ಮಹನೀಯರಿಗೆ ವಂದನೆಗಳು.

ಇಂಥ ಒಂದು ಮಹತ್ವದ ಯೋಜನೆಯನ್ನು ರೂಪಿಸಿ, ಕ್ಲುಪ್ತ ಅವಧಿಯಲ್ಲಿ ಕೃತಿಗಳನ್ನು ಪ್ರಕಟಿಸುತ್ತಿರುವ ನಮ್ಮ ದಿನಮಾನದ ಕ್ರಿಯಾಶೀಲ ವಿದ್ವಾಂಸರೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರೂ ಆದ ಡಾ. ಬಿ. ವಿ. ವಸಂತಕುಮಾರ ಅವರಿಗೆ ಅನಂತ ವಂದನೆಗಳು. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಕರಿಯಪ್ಪ ಅವರಿಗೂ ಉಳಿದ ಎಲ್ಲ ಸದಸ್ಯರಿಗೆ ವಂದನೆಗಳು.

ಈ ಯೋಜನೆಯ ಸಂಪಾದಕರಲ್ಲಿ ಒಬ್ಬರಾದ ಡಾ. ಮೃತ್ಯುಂಜಯ ರುಮಾಲೆ ಅವರು ನನ್ನ ಬೆನ್ನ ಹಿಂದಿನ ಶಕ್ತಿಯಾಗಿ, ಕಣ್ಣ ಮುಂದಿನ ಬೆಳಕಾಗಿ ಮಾರ್ಗದರ್ಶನ ಮಾಡಿದ್ದಾರೆ. ಅವರ ಪ್ರೇರಣೆ–ಪ್ರೋತ್ಸಾಹ ಇಲ್ಲದಿದ್ದರೆ ಇಷ್ಟು ಬೇಗ ಈ ಕೃತಿಗಳನ್ನು ರಚಿಸಲು ಸಾಧ್ಯವಿರಲಿಲ್ಲ. ಅವರಿಗೆ ಅನಂತ ವಂದನೆಗಳು. ಸಂಪಾದಕರಾದ ಡಾ. ಎಸ್.ಜಿ.ರಾಮದಾಸ ರೆಡ್ಡಿ, ಡಾ. ಪ್ರಕಾಶ ಗ. ಖಾಡೆ, ಶ್ರೀ ಎಸ್.ಎಸ್. ನರೇಂದ್ರಕುಮಾರ ಮತ್ತು ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು ಅವರಿಗೆ ಅನಂತ ವಂದನೆಗಳು.

ಆಕರ ಸಾಮಗ್ರಿ ಒದಗಿಸಿಕೊಟ್ಟ ಶ್ರೀ ರಾಯನಗೌಡ ಪಾಟೀಲ, ಡಾ. ಬಿ. ನಂಜುಂಡಸ್ವಾಮಿ, ಡಾ. ಸರಜೂ ಕಾಟ್ಕರ್, ಡಾ. ಬಸವರಾಜ ಜಗಜಂಪಿ, ಡಾ. ಎಂ. ಎಸ್. ಹುಲ್ಲೋಳಿ, ಮೊದಲಾದ ಹಿರಿಯರಿಗೆ ವಂದನೆಗಳು.

**ಪ್ರಕಾಶ ಗಿರಿಮಲ್ಲನವರ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟ : ಹುಲಕುಂದ | ೧೫ |
| ಭೀಮಕವಿ | ೧೭ |
| ಭೀಮಕವಿ ಶಿಷ್ಯ ಮರಿಕಲ್ಲ ಕವಿ | ೩೩ |
| ರಾಮದುರ್ಗ ದುರಂತ ಲಾವಣಿ : ಒಂದು ಚಾರಿತ್ರಿಕ ಕಥನ ಗೀತೆ | ೩೪ |
| ಶಿವಲಿಂಗ ಕವಿ | ೪೦ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೪೫ |

# ಸ್ವಾತಂತ್ರ್ಯ ಹೋರಾಟ : ಹುಲಕುಂದ

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಹುಲಕುಂದ ಎಂಬ ಚಿಕ್ಕ ಗ್ರಾಮ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯವಾದುದು. ಇಡೀ ದೇಶದಲ್ಲಿ ಆಂಗ್ಲರ ವಿರುದ್ಧ ನಡೆದ ಆಂದೋಲನಕ್ಕೆ ಹುಲಕುಂದ ಗ್ರಾಮದ ಕವಿಗಳು ಕೊಟ್ಟ ಕಾಣಿಕೆ ಅನನ್ಯ–ಅಪರೂಪ. ತಮ್ಮ ಗೀಗೀ ಪದಗಳಿಂದ, ಲಾವಣಿಗಳಿಂದ ನಾಡ ಜನರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಜಾಗ್ರತಗೊಳಿಸಿದ ಕೀರ್ತಿ ಹುಲಕುಂದದ ಲಾವಣಿಕಾರರಿಗೆ ಸಲ್ಲಬೇಕು. ೧೯೩೦ರ ವರೆಗೆ ಸ್ವಾತಂತ್ರ್ಯ ಹೋರಾಟ ಕೇವಲ ವಿದ್ಯಾವಂತರ ಹೋರಾಟವಾಗಿತ್ತು. ಗ್ರಾಮೀಣ ಭಾಗದ ಜನರೂ ಇದರಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಶ್ರೇಯಸ್ಸು ಹುಲಕುಂದ ಲಾವಣಿಕಾರರದು. ೧೯೨೦ರ ಸುಮಾರಿಗೆ ಗಾಂಧೀಜಿಯವರು ಈ ಹೋರಾಟದಲ್ಲಿ ಪಾಲ್ಗೊಂಡ ಪರಿಣಾಮವಾಗಿ, ಹೋರಾಟದ ವ್ಯಾಪ್ತಿ ವಿಸ್ತಾರವಾಯಿತು. ೧೯೩೦ರಲ್ಲಿ ನಡೆದ ದಂಡಿಯಾತ್ರೆ ಮತ್ತು ಉಪ್ಪಿನ ಸತ್ಯಾಗ್ರಹಗಳು ಸಾಮಾನ್ಯ ಜನರಲ್ಲಿಯೂ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಮೂಡಿಸಿದವು. ಇದರ ಪರಿಣಾಮವಾಗಿ ಭಾರತೀಯ ಯುವಕರಲ್ಲಿ ರಾಷ್ಟ್ರಪ್ರಜ್ಞೆಯ ಅರಿವು ಜಾಗೃತಗೊಳ್ಳತೊಡಗಿತು. ೧೯೪೨ರಲ್ಲಿ ಚಲೇಜಾವ ಚಳುವಳಿ ನಿಜವಾದ ಅರ್ಥದಲ್ಲಿ ಸಮಸ್ತ ಭಾರತೀಯರು ಪಾಲ್ಗೊಂಡ ಹೋರಾಟವೆನಿಸಿತು. ಏಕೆಂದರೆ ಅದರಲ್ಲಿ ಭಾಗವಹಿಸಿದ ಬಹುಸಂಖ್ಯಾತರು ಗ್ರಾಮೀಣ ಪ್ರದೇಶದ ಮುಗ್ಧ ಯುವಕರು. ೪೨ರ ಚಳುವಳಿಯ ಪ್ರವಾಹಕ್ಕೆ ಅಗಾಧ ಪ್ರಮಾಣದಲ್ಲಿ ಜನಸಾಗರ ಭಾಗವಹಿಸಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಹುಲಕುಂದದ ಲಾವಣಿಕಾರರ ಲಾವಣಿ–ಗೀಗೀ ಪದಗಳ ಪಾತ್ರ ಗಮನಾರ್ಹವಾದುದು. ಹುಲಕುಂದದ ಲಾವಣಿ ಕವಿಗಳು ಈ ಹೋರಾಟಕ್ಕೆ ಒಂದು ದಿಕ್ಕು ದೆಸೆ ತೋರಿಸಿದರು.

ಕ್ರಿ.ಶ. ೧೯೪೬ರಲ್ಲಿ ರಾಮದುರ್ಗ ರಾಜ್ಯವನ್ನು ವೆಂಕಟರಾವನ ಮಗ ರಾಮರಾವ ಬ್ರಿಟಿಷರ ಅನುಮತಿಯಿಲ್ಲದೆ ರಾಜ್ಯಭಾರ ಮಾಡುತ್ತಿದ್ದನು ಇದೇ ಸಮಯದಲ್ಲಿ ಗೋಕಾಕ ಮತ್ತು ರಾಮದುರ್ಗ ತಾಲೂಕುಗಳನ್ನು ಮರುವಿಂಗಡಿಸಿದ. ಆಗ ಇವನ ಆಡಳಿತದಲ್ಲಿ ಇದ್ದ ೪೨ ಹಳ್ಳಿಗಳಲ್ಲಿ ೩೩ ಹಳ್ಳಿಗಳನ್ನು ಬೇರ್ಪಡಿಸಿ ರಾಮದುರ್ಗ ತಾಲೂಕನ್ನು ಮರು ವಿಂಗಡಿಸಲಾಯಿತು. ಈ ಪೂರ್ವದಲ್ಲಿ ಕೇವಲ ೨೬ ಹಳ್ಳಿಗಳಿಂದ ಕೂಡಿದ ರಾಮದುರ್ಗ ತಾಲೂಕಿಗೆ ಗೋಕಾಕ ತಾಲೂಕಿನ ತೊಂಡಿಕಟ್ಟಿ, ಬುದ್ನಿ, ಹೊಸಕೋಟೆ, ಗುತ್ತಿಗೋಳಿ, ಹುಲಕುಂದ, ಕಮಕೇರಿ ಮತ್ತು ಕುನ್ನಾಳ ಗ್ರಾಮಗಳನ್ನು ಸೇರಿಸಲಾಯಿತು. ಭೀಮಕವಿ ತನ್ನ ಒಂದು ಲಾವಣಿಯಲ್ಲಿ

**ಗೋಕಾಕ ತಾಲೂಕಿನ ಹುಲಕುಂದ ಚಂದ**
**ಲೋಕನಾಯಕ ಭೀಮೇಶನ ಕವಿ ಚಂದ**

ಎಂದು ಹಾಡಿರುವುದನ್ನು ಗಮನಿಸಿದರೆ, ಹುಲಕುಂದ ಮೊದಲು ಗೋಕಾಕ ತಾಲೂಕಿಗೆ ಸೇರಿತ್ತು, ತದನಂತರ ರಾಮದುರ್ಗ ತಾಲೂಕಿಗೆ ಸೇರಿತ್ತೆಂದು ತಿಳಿಯುತ್ತದೆ.

ಕ್ರಿ.ಶ. ೧೯೨೦ರಲ್ಲಿ ನಡೆದ ಚಳುವಳಿಯಲ್ಲಿ ಹುಲಕುಂದ ಗ್ರಾಮದ ಶಿವಲಿಂಗ ಕವಿ (ಇವರು ಒಂದು ಮಠದ ಸ್ವಾಮಿಗಳಾಗಿದ್ದರು). ರಾಜೇಸಾಬ್ ಅತ್ತಾರ, ಹಣಮಂತಪ್ಪ ಮಿರ್ಜಿ, ಮಲ್ಲಪ್ಪ ಬೂದಿ, ಸೈದು ಸಾಬ್, ಅಲ್ಲಿಸಾಹೇಬ್ನವರ, ಸಂಗಯ್ಯ ಸಂಬಾಳ, ಭೀಮಪ್ಪ ಶೇಷಣ್ಣನವರ, ರಾಮಪ್ಪ ಸಂ. ಬೆಟಗೇರಿ, ಬಸಪ್ಪ ಸಂ. ಬೆಟಗೇರಿ (ಭೀಮಕವಿ), ರಾಮನಗೌಡ ಪಾಟೀಲ ಮೊದಲಾದವರು ಭಾಗವಹಿಸಿದ್ದರು. ಹುಲಕುಂದದ ಶಿವಲಿಂಗಕವಿ, ಭೀಮಕವಿಗಳ ಪಾತ್ರ ಅವಿಸ್ಮರಣೀಯವಾದುದು. ಭೀಮಕವಿಯ ಲಾವಣಿಗಳಂತೂ ಯುವಜನರ ಮನದಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚುವಲ್ಲಿ ತುಂಬ ಪರಿಣಾಮಕಾರಿ ಪಾತ್ರವಾಡಿದವು. ಹೀಗಾಗಿ ಆ ಲಾವಣಿಕಾರರ ಸಾಧನೆಯೇ ಸ್ವಾತಂತ್ರ್ಯದ ಸಾಧನೆಯೆಂದು ಗಮನಿಸಿ ಇಲ್ಲಿ ಭೀಮಕವಿ, ಶಿವಲಿಂಗಕವಿ ಮೊದಲಾದವರ ಹೋರಾಟದ ಇತಿಹಾಸವನ್ನು ಅವಲೋಕಿಸಲಾಗಿದೆ.



## ಭೀಮಕವಿ

ಬೆಳಗಾವಿ ಜಿಲ್ಲೆಯ ಹುಲಕುಂದ 'ಭೀಮಕವಿ' ಎಂದು ಹೆಸರಾದ ಕವಿಯ ನಿಜವಾದ ಹೆಸರು ಬಸಪ್ಪ ಸಂಗಪ್ಪ ಬೆಟಗೇರಿ. ಹುಟ್ಟಿದ್ದು ೩–೨–೧೯೦೯ರಲ್ಲಿ, ತೀರಿಕೊಂಡದ್ದು ೨೨–೬–೧೯೬೦ರಲ್ಲಿ. ಕಲಿತದ್ದು ಕನ್ನಡ ೬ನೇ ಈಯತ್ತೆ. ಉದ್ಯೋಗ ನೇಕಾರಿಕೆ. ಇವರ ಮನೆಯ ಸಮೀಪವೇ ಭೀಮ ಎಂಬ ಸಾಧುವಿನ ಗದ್ದಿಗೆಯೊಂದಿದೆ. ಆ ಗದ್ದುಗೆಯ ದರ್ಶನ ಪಡೆದೇ ತನ್ನ ಕಾರ್ಯ ಕೈಕೊಳ್ಳುತ್ತಿದ್ದ ಈ ಬಸಪ್ಪನಿಗೆ ಕಾವ್ಯ ರಚಿಸುವ ಶಕ್ತಿ ಬಂದದ್ದು ಆ ಸಾಧುವಿನ ಕೃಪೆಯೆಂದೇ ಬಗೆದು ಆತನನ್ನೇ ಹಾಡುಗಳಲ್ಲಿ ಸ್ಮರಿಸಿದ್ದಾನೆ. ತಂದೆಯೂ ಕವಿ ಇದ್ದ ಎನ್ನುವುದನ್ನು ಮರೆಯುವಂತಿಲ್ಲ. ಹರಿಶ್ಚಂದ್ರ, ಮಾರ್ಕಂಡೇಯ, ಸಿರಿಯಾಳ ಮೊದಲಾದ ಬಯಲಾಟದ ಕತೆಗಳನ್ನು ಭೀಮಕವಿಯ ತಂದೆ ಸಂಗಪ್ಪ ರಚಿಸಿದ್ದಾನೆ. ತಂದೆಯ ಪ್ರಭಾವವೂ ಈತನ ಮೇಲೆ ಬಿದ್ದುದನ್ನು ನೆನೆಯಬಹುದು. 'ಭೀಮಕವಿ' ಎಂಬುದು ಈತನ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ. ಭೀಮೇಶ, ಭೀಮ, ಭೀಮರಾಯ ಭೀಮಸಿಂಗ ಮೊದಲಾದ ಹೆಸರುಗಳೂ ಬರುತ್ತವೆ.

ಭೀಮಕವಿ ಸ್ವತಃ ಹಾಡುಗಾರ. ಹೊಸೂರಲ್ಲಿ ಮೇಳ ಕಟ್ಟಿಕೊಂಡು ನಾಡಿನ ತುಂಬೆಲ್ಲಾ ಹಾಡುಗಳ ಮುಖಾಂತರ ರಾಷ್ಟ್ರಾಭಿಮಾನ ಹೆಚ್ಚಿಸಿದವನು. ಸ್ವತಃ ಕವಿಯೂ ಹೌದು. ಸಾವಿರಾರು ಲಾವಣಿ ರಚಿಸಿದ್ದಾನೆ. ಸರಕಾರದ ಪ್ರಚಾರಕ್ಕೆ ಮೀಸಲಾದ ಹಾಡುಗಳಿಗಂತೂ ಲೆಕ್ಕವಿಲ್ಲ. ಸರ್ವೋದಯ ಪ್ರಚಾರದ ಹಾಡುಗಳೂ ಸಾಕಷ್ಟು ರಚಿತವಾಗಿವೆ. ೧೯೪೨ರಲ್ಲಿ ಜೈಲೂ ಕಂಡು ಬಂದ ಈ ಕವಿಗೆ ಸಾಯುವವರೆಗೂ ಸರಕಾರದ ಸಹಾಯಧನ ದೊರೆಯುತ್ತಿತ್ತು. ತನ್ನ ಅರವತ್ತು ವರುಷಗಳ ತುಂಬುಜೀವನದಲ್ಲಿ ಕವಿ ಉಂಡದ್ದು ಹೆಚ್ಚಾಗಿ ಬಡತನದ ಕಹಿಯನ್ನೇ, ಮಗನಿಗೂ ಇದರಲ್ಲಿ ಪಾಲು. ಭೀಮಕವಿ ಹಣಗಳಿಸದಿದ್ದರೂ ಹಾಡು ರಚಿಸಿ ಹೆಸರು ಗಳಿಸಿದರು. ಅದರಿಂದ ಆ ಊರಿಗೂ–ನಾಡಿಗೂ ವಿಶೇಷವಾಗಿ ಜಾನಪದ ಕ್ಷೇತ್ರಕ್ಕೆ ದೊಡ್ಡ ಹೆಸರು.

ಭೀಮಕವಿಯು ಆಕಾಶವಾಣಿಯಲ್ಲಿ ಹಾಡಿದ ಹಾಡುಗಳು ಧ್ವನಿ ಮುದ್ರಿಕೆಯಲ್ಲಿ (ಟೇಪ್ ರೆಕಾರ್ಡ) ಇರುವವಲ್ಲದೆ, ಕೆಲವು ಮುದ್ರಣಗೊಂಡಿರುತ್ತವೆ. ಮುದ್ರಣಗೊಂಡ ಕೃತಿಗಳು ಇಂತಿವೆ:

೧. ಜಾನಪದ ರಗಳೆಗಳು, ಸಂ. ತಲ್ಲೂರ ರಾಯನಗೌಡರು–೧೯೪೭

೨. ಸರ್ವೋದಯ ಗ್ರಾಮೀಣ ಜನಪದ ಗೀತೆಗಳು–೧೯೬೭

೩. ಗ್ರಾಮದಾನ ಭೂದಾನ ಪದ್ಯಾವಳಿ–೧೯೬೪, ೧೯೬೭

೪. ಗೀಗೀ ಪದ್ಯಸಂಗ್ರಹ–೧೯೫೫

ಇನ್ನೂ ಅಚ್ಚಾಗದೇ ಇದ್ದ ಸಾವಿರಾರು ಹಾಡುಗಳನ್ನು ಸಂಗಪ್ಪ ಅವರಿಂದ ಸಂಗ್ರಹಿಸಲಾಗಿದೆ.

ಭೀಮಕವಿಯ 'ಎಂಥಾ ಶಾಣ್ಯಾ ಮಹಾತ್ಮಾ ಗಾಂಧಿ' ಎಂಬ ಹಾಡು ಅತ್ಯಂತ ಜನಪ್ರಿಯವಾದುದು. ಪ್ರಾಸ ಜೋಡಿಸುವುದರಲ್ಲಿ ಕವಿಯ ಜಾಣ್ಮೆ ಎದ್ದು ಕಾಣುತ್ತದೆ.

**ಕೂಡಿದ ಜನರೊಳು ಹಾಡಿದ ಪದಗಳು**
**ಪೇಡೆ ತಿಂದಂತೆ ಆಗಬೇಕು ಸವಿ**
**ಕೂಡದ ಪ್ರಾಸ ಗುದ್ಯಾಡಿ, ಜೋಡಸಾವ**
**ರೂಢಿಯೊಳಗ ಶತಮೂಢ ಕವಿ**

ಹಾಲುಮತದ ಪುರಾಣ ಕುರುಬರ ಸಮಾಜಕ್ಕೊಂದು ಬೈಬಲ್ಲ ಇದ್ದ ಹಾಗೆ. ಆ ತತ್ವಕ್ಕಂಟಿಕೊಂಡ ನೂರಾರು ಡೊಳ್ಳಿನ ಹಾಡುಗಳನ್ನು ಈ ಕವಿ ರಚಿಸಿದ್ದಾನೆ. ಅಲ್ಲಲ್ಲಿ ಹಾಡುವ ತೋಡಿಯ, ಖ್ಯಾಲಿಯ ಹಾಡುಗಳಿಗಂತೂ ಲೆಕ್ಕವಿಲ್ಲ. 'ನಾಡಿನ ಜನರು ಬೇಡಿದ ಪದ್ಯ ಮಾಡಿ ಹಾಡಾಂವ ಹುಲಕುಂದ ಭೀಮಕವಿ' ಎಂಬ ಕವಿಯ ನುಡಿಯಲ್ಲಿ ಯಾವ ಅತಿಶಯೋಕ್ತಿಯಿಲ್ಲ ಎನಿಸುತ್ತದೆ.

**ಕೈಯಾಗ ರೊಕ್ಕಯಿಲ್ಲ ಮೈಯಾಗ ರಕ್ತಯಿಲ್ಲ**
**ಕಾಲಾಗ ಶಕ್ತಿಯಿಲ್ಲ ಈಗಿನ ಗಂಡಸರಾ**
**ಚಹಾ ಕುಡದ ಆಗ್ಯಾರ ಭಾಳ ಹಗರಾಽ । ಗೀ– ಗೀ**
**ಖರ್ಚು ಕಡ್ಮಿ ಮಾಡುದಿಲ್ಲ ಹೇಳಿದರ ಕೇಳುದಿಲ್ಲ.**
**ತಮ್ಮದ ನಡಸ್ತಾರ ಭಾಳ ಟೊಪ್ಪಿಗಿಯವರ್‍ನ ಕಂತ್ರ**
**ಕಂಡ್ಹಂಗ ಮಾತಾಡಸ್ತಾರ ಇವರಾ । ಗೀ–ಗೀ**



**ಗಾಂಧಿ ಟೋಪಿ ಹಾಕುದಿಲ್ಲ ಹಾಕಿದವರ್‍ಗಿ ಸೇರುದಿಲ್ಲ**
**ಒಲ್ಲೇವ ಅಂತಾರ ಅರಣ್ಯ ಪಂಡಿತರಾ**
**ಇಂತಾವ್ರ ನೋಡ್ರಿ ಹಿಂದೂಸ್ತಾನ ಕಳ್ಯಾವರಾ । ಗೀ ಗೀ**
**ದೇಶಸೇವಾ ಮಾಡುದಿಲ್ಲ ಸ್ವರಾಜ್ಯದ ಗರಜಿಲ್ಲ**
**ಗಾಂಧಿಯವ್ರ ದರಜಿಲ್ಲ ಇವರೆಂಥಾ ಲಫಂಗರಾ**
**'ಭೀಮೇಶಗ' ವಿರುದ್ಧ ನುಡಿಯುವರಾ । ಗೀ–ಗೀ**

ಎಂಬ ಈ ಹಾಡಿನಲ್ಲಿ ಅವರು ದೇಶಾಭಿಮಾನಕ್ಕಾಗಿ ಹೋರಾಡಿದುದನ್ನು ಅರಿತುಕೊಳ್ಳಬಹುದಾಗಿದೆ.

ಹುಲಕುಂದದ ಭೀಮಕವಿ ಲಾವಣಿ ಮೂಲಕ ಸ್ವಾತಂತ್ರ್ಯ ಚಳುವಳಿಗೆ ನಾಂದಿ ಹಾಡಿದ ವ್ಯಕ್ತಿ. ಲಾವಣಿ ಎಂಬುದು ಮೂಲತಃ ಮರಾಠಿಯಿಂದ ಕನ್ನಡಕ್ಕೆ ಬಂದ ಒಂದು ಗೀತ ಪ್ರಕಾರ. ಪೇಶ್ವೆಗಳ ಆಡಳಿತ ಕಾಲಕ್ಕೆ ೧೭೫೦–೧೮೫೦ರ ಅವಧಿಯಲ್ಲಿ ಹುಟ್ಟಿಕೊಂಡ ಲಾವಣಿ ಪ್ರಕಾರ ಮುಖ್ಯವಾಗಿ ಜನರಲ್ಲಿ ಶೃಂಗಾರದ ಪದಗಳನ್ನು ಹಾಡುವ ಮೂಲಕ ಮನರಂಜನೆಯನ್ನು ಒದಗಿಸುವ ಒಂದು ಪ್ರಕಾರವಾಗಿತ್ತು. ೧೮೩೦ರ ತರುವಾಯ ಈ ಪ್ರಕಾರ ಕನ್ನಡಕ್ಕೂ ಪ್ರಚಾರವಾಯಿತು. ೧೮೨೯ರಲ್ಲಿ ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷ್‌ರು ಗಲ್ಲಿಗೇರಿಸಿದರು. ಈ ಘಟನೆಯನ್ನು ಕುರಿತು ಪ್ರಕಟಗೊಂಡ ಹೆಬ್ಬಳ್ಳಿ ಪುಂಡ ಬಸವ ಎಂಬ ಕವಿ ಬರೆದ ಲಾವಣಿಯೇ ಕನ್ನಡದ ಮೊಟ್ಟಮೊದಲ ಲಾವಣಿ ಎನಿಸಿದೆ.

ಕನ್ನಡದ ಲಾವಣಿಕಾರರು ಪ್ರಾರಂಭದಲ್ಲಿ ಶೃಂಗಾರಕ್ಕೆ ಹೆಚ್ಚು ಒತ್ತು ಕೊಟ್ಟರೂ ತರುವಾಯ ಸಂಗೊಳ್ಳಿ ರಾಯಣ್ಣನ ಗಲ್ಲು, ಹಲಗಲಿ ಬೇಡರ ನಿಶ್ಶಸ್ತ್ರೀಕರಣ ಹೋರಾಟ, ಕಿತ್ತೂರು ಚೆನ್ನಮ್ಮ ಮೊದಲಾದ ಸಮಕಾಲೀನ ಸಂಗತಿಗಳು ಲಾವಣಿಗೆ ವಸ್ತುವಾದವು. ಇದರಿಂದ ಕನ್ನಡದಲ್ಲಿ ಸ್ವಾತಂತ್ರ್ಯ– ರಾಷ್ಟ್ರೀಯ ಪರಿಕಲ್ಪನೆಯನ್ನು ಮೂಡಿಸುವ ಲಾವಣಿಯೊಂದಿಗೆ ಲಾವಣಿ ರಚಕರ ಒಂದು ಹೊಸ ಪರಂಪರೆ ಕನ್ನಡದಲ್ಲಿ ಹುಟ್ಟಿಕೊಂಡಿತು. ಮರಾಠಿ ಲಾವಣಿಕಾರರಲ್ಲಿ ರಾಷ್ಟ್ರೀಯ ಭಾವನೆ ೧೯೦೦ ರಷ್ಟೊತ್ತಿಗೆ ಹುಟ್ಟಿಕೊಂಡಿತ್ತು. ಆದರೆ ಕನ್ನಡದ ಲಾವಣಿಕಾರರು ಹೆಚ್ಚು ಶೃಂಗಾರಕ್ಕೆ ಒತ್ತು ಕೊಟ್ಟ ಪರಿಣಾಮವಾಗಿ ಈ

ವಿಷಯವಾಗಿ ಒಂದು ಜಾಗೃತ ಪ್ರಜ್ಞೆ ಹುಟ್ಟಿಕೊಂಡಿದ್ದು ೧೯೩೦ರಲ್ಲಿ, ಅದು ಹುಲಕುಂದದ ಲಾವಣಿಕಾರರಿಂದ ಎನ್ನುವುದು ವಿಶೇಷ ಸಂಗತಿಯಾಗಿದೆ. ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸದ ಸಂಪ್ರದಾಯವಾದಿ ಲಾವಣಿಕಾರರ ನಡುವೆ, ಬೆಳಗಾವಿ ಜಿಲ್ಲೆಯ ಹುಲಕುಂದ ಗ್ರಾಮದಲ್ಲಿ ರಾಷ್ಟ್ರೀಯವಾದಿ ಲಾವಣಿಕಾರರ ಗುಂಪು ತಲೆ ಎತ್ತಿತ್ತು. ಸಂಗಪ್ಪ ಬೆಟಗೇರಿ ಎಂಬ ಕವಿ **ಭೀಮಕವಿ** ಎಂಬ ಕಾವ್ಯನಾಮದಿಂದ ಲಾವಣಿ ರಚನೆಗೆ ತೊಡಗಿದ.

ಭೀಮಕವಿ ಮೊದಲುಗೊಂಡು ಶಿವಲಿಂಗಕವಿ, ಹಣಮಪ್ಪ ಬಸಪ್ಪ ಮಿರ್ಜಿ, ಸಿದ್ಧರಾಯ ಗಿರಿಮಲ್ಲ, ಸಂಗಯ್ಯ ಮೊದಲಾದವರು ರಾಷ್ಟ್ರೀಯ ಪದಗಳನ್ನು ರಚಿಸಿ, ೧೯೩೦ರ ಸುಮಾರಿಗೆ 'ರಾಷ್ಟ್ರೀಯ ಗೀಗೀ ಪದಗಳು' ಎಂಬ ಸಂಕಲನವನ್ನು ಪ್ರಕಟಿಸಿದರು. ೨೪ ಪುಟಗಳ ಈ ಚಿಕ್ಕ ಪುಸ್ತಕ ಬೆಳಗಾವಿ ಜಿಲ್ಲೆಯ ಜನರ ಮನಸ್ಸನ್ನು ತುಂಬ ಆಕರ್ಷಿಸಿತು. ರಾಷ್ಟ್ರಭಕ್ತಿಯ ಅಭಿಮಾನವನ್ನು ಜನರಲ್ಲಿ ಮೂಡಿಸಿತು. ಈ ಹೊತ್ತಿಗೆಯನ್ನು ಪ್ರಕಟಿಸಲು ಪ್ರೇರಣೆ ಏನು? ಎಂಬುದನ್ನು ಕುರಿತು ಹಣಮಂತ ಮಿರ್ಜಿ ಅವರು ತಮ್ಮ ಪ್ರಾರಂಭದ ಮಾತುಗಳಲ್ಲಿ ಹೀಗೆ ಹೇಳುತ್ತಾರೆ– "ಅಖಿಲ ಕರ್ನಾಟಕದಲ್ಲಿ ಮೊದಲಿನಿಂದಲೂ ರೂಢಿಯೊಳಗಿದ್ದ ಗೀಗೀ ಪದಗಳು ಕಾಲಮಾನ ಪರಿಸ್ಥಿತಿ ಅನುಸರಿಸಿ ಆಧ್ಯಾತ್ಮಿಕ, ಸಾಮಾಜಿಕ, ಧಾರ್ಮಿಕ, ನೈತಿಕ ವಿಷಯಗಳ ಪ್ರಚಾರ ಮಾಡುತ್ತ ಬಂದ ಸಂಗತಿಯು ತಮ್ಮೆಲ್ಲರಿಗೆ ಗೊತ್ತಿರಲಿಕ್ಕೆ ಸಾಕು. ಆದರೆ ಇತ್ತೀಚೆಗೆ ದೇಶವು ಪಾರತಂತ್ರ್ಯದಲ್ಲಿ ಸಿಲುಕಿ ಜನತೆಯು ಅಜ್ಞಾನಾಂಧಕಾರದಲ್ಲಿ ಮುಳುಗಿ ಕೇವಲ ಸ್ವಾರ್ಥಲೋಲುಪರಾಗಿ ಪಾರಮಾರ್ಥಿಕ ವಿಷಯುವನ್ನು ಮರೆತು ವಿಷಯಾಸಕ್ತರಾಗಿ ಶೃಂಗಾರ ಪದಗಳಿಗೆ ಮೋಹಿತರಾದ್ದರಿಂದ ಪದಗಳನ್ನು ಮಾಡುವವರೂ ಹಾಡುವವರೂ ಭೀಭತ್ಸ ಶಬ್ದಗಳಿಂದ ಕೂಡಿದ ಶೃಂಗಾರ ಪದಗಳನ್ನು (ಹರದೇಶಿ ನಾಗೇಶಿ ಅಥವಾ ಕಲಿಗಿ ತುರಾಯಿಯೆಂಬ) ಪದಗಳನ್ನು ಹಾಡತೊಡಗಿದರು.  ಹಳ್ಳಿಯ ಜನರಂತೂ ತಮ್ಮ ವಿರಾಮ ಕಾಲವನ್ನು ಇಂಥ ಪದಗಳನ್ನು ಕೇಳುವುದರಲ್ಲಿಯೇ ಕಳೆದರಲ್ಲದೆ ಬೇರೊಂದು ವಿಷಯವನ್ನು ತಿಳಿದುಕೊಳ್ಳದಷ್ಟು ಅಸಮರ್ಥರಾದರು. ಇತ್ತ ಯುಗನಾಯಕರಾದ ಮಹಾತ್ಮಾ ಗಾಂಧಿಯವರು ಅಜ್ಞಾನದಲ್ಲಿ ಮುಳುಗಿದ ಜನತೆಗೆ ಜ್ಞಾನೋದಯ ವಾಗುವಂತೆಯೂ ಮುಂಬರುವ ಸಂಗ್ರಾಮದಲ್ಲಿ ಹೆಗಲಿಗೆ ಹೆಗಲು ಹಚ್ಚಿ



ಕಾದುವಂತೆಯೂ ಹುರಿದುಂಬಿಸುವುದರ ಸಲುವಾಗಿ ತಮ್ಮ ಅಮೃತವಾಣಿ ಯಿಂದ ಸ್ವಾತಂತ್ರ್ಯ ಮಂತ್ರವನ್ನು ಉಚ್ಚರಿತೊಡಗಿದರು. ಮೊದಲೇ ಅಜ್ಞಾನಿಗಳಾದ ಹಳ್ಳಿಗರ ಬುದ್ಧಿಗೆ ಮಹಾತ್ಮರ ಉಪದೇಶವು ತಿಳಿಯದಂತಾಯಿತು. ಇಂತಹ ಸಂಧಿ ಕಾಲದಲ್ಲಿ ಬೆಳಗಾವಿ ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ಶ್ರೀ ವೆಂಕರೆಡ್ಡಿ ಹೂಲಿಯವರೂ, ವಾಮನರಾವ್ ಬಿದರಿಯವರೂ ಹೇಗೆ ಮಾಡಿ ಹಳ್ಳಿಯ ಜನರಿಗೆ ಗಾಂಧಿ ತತ್ವಗಳನ್ನು ತಿಳಿಸಿ ಕೊಡಬೇಕೆಂಬುದನ್ನು ವಿಚಾರ ಮಾಡತೊಡಗಿದರು. ನಂತರ ಶ್ರೀ ವೆಂಕರೆಡ್ಡಿ ಹೂಲಿಯವರಿಗೆ ಗೀಗೀ ಪದಗಳಿಂದ ತಿಳಿಸಿದರೆ ತಿಳಿಯಬಹುದೆಂದು ಭರವಸೆಯಾಯಿತು. ೧೯೩೦ನೇ ಇಸ್ವಿಯ ಜನವರಿ ೨೬ನೇ ತಾರೀಖಿಗೆ ಹುಲಕುಂದಕ್ಕೆ ಬಂದು ನಮ್ಮೆಲ್ಲರಿಗೆ ಗಾಂಧೀಜಿ ವಿಚಾರಗಳನ್ನು ತಿಳಿಸಿ ವಿಧಾಯಕ ಕಾರ್ಯಕ್ರಮಗಳ ಪ್ರಚಾರ ಮಾಡುವಂತೆ ಹುರಿದುಂಬಿಸಿದರು. ಇದರ ಪರಿಣಾಮವಾಗಿ ಹುಲಕುಂದದ ಬಸಪ್ಪ ಸಂಗಪ್ಪ ಬಟಗೇರಿ (ಭೀಮಕವಿ), ಹಣಮಪ್ಪ ಬಸಪ್ಪ ಮಿರ್ಜಿ, ಹುಲಕುಂದ ಪಟ್ಟದ್ದೇವರು (ಶಿವಲಿಂಗಕವಿ) ಸಿದ್ಧರಾಯ ಗಿರಿಮಲ್ಲ, ಸಂಗಯ್ಯ ಮುಂತಾದವರು ರಾಷ್ಟ್ರೀಯ ಪದಗಳನ್ನು ರಚಿಸಿದರು. ಅದೇ ಗ್ರಾಮದ ಗೀಗೀ ಮೇಳ ತಯಾರಾಯಿತು. 'ಆರೂಢದ ಹಿಂದ ಗೀಗೀ ಮೇಳ' ಎಂಬ ಹೆಸರಿನ ಈ ಮೇಳವು ರಾಷ್ಟ್ರೀಯ ವಿಚಾರಗಳ ಪ್ರಚಾರಕ್ಕೆ ಕಂಕಣಬದ್ಧವಾಯಿತು. ಬೆಳಗಾವಿ, ಧಾರವಾಡ, ವಿಜಾಪುರ, ಬಳ್ಳಾರಿ, ಕಾರವಾರ, ಸೊಲ್ಲಾಪುರ ಜಿಲ್ಲೆಗಳಲ್ಲಿ ಸಂಚರಿಸಿತು."

ಹುಲಕುಂದದ ಈ ಗೀಗೀ ಮೇಳದ ಕಲಾವಿದರು ಸಂಪೂರ್ಣ ಖಾದಿಧಾರಿಗಳಾಗಿ, ತುಂತುಣಿಯ ಕೋಲಿನ ತುದಿಗೆ ರಾಷ್ಟ್ರೀಯ ಧ್ವಜವೊಂದನ್ನು ಹಾಕಿಕೊಂಡು ಹಳ್ಳಿ ಹಳ್ಳಿ ತಿರುಗಿ ರಾಷ್ಟ್ರೀಯ ಲಾವಣಿಗಳನ್ನು ಪ್ರಸ್ತುತ ಪಡಿಸುತ್ತಿದ್ದರು. ಈ ಗೀಗೀ ಮೇಳದವರಿಂದ ಪ್ರಭಾವಿತಗೊಂಡ ಇತರ ಕವಿಗಳು ಇಂಥ ಅಪರೂಪದ ಲಾವಣಿಗಳ ರಚನೆಗೆ ಪ್ರಾರಂಭ ಮಾಡಿದರು.

ಭೀಮಕವಿ ರಚಿಸಿದ ಲಾವಣಿಗಳಲ್ಲಿ ಬಹುತೇಕ ರಾಷ್ಟ್ರೀಯ ಗೀತೆಗಳಾಗಿ ಜನಮನ್ನಣೆ ಪಡೆದುಕೊಂಡವು. ಅಧ್ಯಾತ್ಮ–ಆತ್ಮಜ್ಞಾನ ಹೇಳುವ ಕೆಲವು ತತ್ವಪದಕಾರರನ್ನು ಭೀಮಕವಿ ಒಂದು ಕಡೆ ತರಾಟೆಗೆ ತೆಗೆದುಕೊಂಡು ಅಧ್ಯಾತ್ಮಕ್ಕಿಂತ ಮೊದಲು ಸತ್ಯಾಗ್ರಹ ನಡೆಯಬೇಕು, ಭಾರತಾಂಬೆಗೆ ಜಯಕಾರ ಹಾಕಬೇಕೆಂದು ತಮ್ಮದೊಂದು ಲಾವಣಿಯಲ್ಲಿ ಹೀಗೆ ಹೇಳುತ್ತಾರೆ–

**ನಿರಾಕಾರ ಆಕಾರ ಹೇಳೂದಲ್ಲ**
**ಅಹಂಕಾರ ಏಟು ತರವಲ್ಲ**
**ಜಯಕಾರ ಹಾಕರಿ ಮೊದಲ**
**ಭಾರತಾಂಬೆ ಆಗುವಳು ಖುಷಿಯಾಲ**
**ಆತ್ಮಜ್ಞಾನದ ತತ್ವ ತಿಳಿದ ಮ್ಯಾಲ**
**ಸತ್ಯಾಗ್ರಹದ ಬೆನ್ನ ಹತ್ತಬೇಕರಿ**
**ಹತ್ತದವ ಒಬ್ಬ ಕತ್ತಿ ಸರಿ**

ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸದೆ ಸಮಾಜ ವಿಮುಖರಾಗಿ ಅಧ್ಯಾತ್ಮದ ಒಣ ಚರ್ಚೆಯಲ್ಲಿ ಕುಳಿತ ಜನರನ್ನು ಗುರಿಯಾಗಿಟ್ಟುಕೊಂಡು ಭೀಮಕವಿ ಮೇಲಿನಂತೆ ಹೇಳುತ್ತಾನೆ. ಸದ್ಯದ ಪರಿಸ್ಥಿತಿಗೆ ನೀವು ಸ್ಪಂದಿಸದಿದ್ದರೆ, ನೀವು ಕತ್ತೆಗಳೆ ಸರಿ ಎನ್ನುತ್ತಾನೆ.

ಭೀಮಕವಿ ತನ್ನ ಪ್ರಾರಂಭದ ಶಿವಸ್ತುತಿ ಗೀತೆಗಳ ಬದಲಾಗಿ ಭಾರತಾಂಬೆಯನ್ನು ಸ್ತುತಿಸತೊಡಗಿದರು. ಮೂಲತಃ ಲಿಂಗಾಯತರಾದ ಭೀಮಕವಿ ತನ್ನ ಶಿವಸ್ತುತಿಯನ್ನು ಬಿಟ್ಟು, ಭಾರತ ಮಾತೆಯ ಸ್ತುತಿಗೆ ಶ್ರೀಕಾರ ಹಾಕಿದರು.

**ಭಾರತಾಂಬೆಯ ಶಾರದಾ ತಾಯಿಗೆ**
**ಪೂರ ಶಿರಸಾಷ್ಟಾಂಗ ನಮಸ್ಕಾರ**
**ಬರಿಯಲಿಕೆ ಕಲಿಸಿದ ಗುರುವರ್ಯರಿಗೆ**
**ಶಿರಬಾಗಿ ಮಾಡುವೆ ನಮಸ್ಕಾರ**

ಎಂದು ಬದಲಾಯಿಸಿಕೊಂಡದ್ದು ಭಾರತಾಂಬೆ ಎಂಬ ದೈವದ ಶ್ರೇಷ್ಠತೆಯನ್ನು ಸ್ಥಾಪಿಸಿದ್ದು ಒಂದು ವಿಶೇಷವೆಂದೇ ಹೇಳಬೇಕು. ಭೀಮಕವಿ ಭಾರತಮಾತೆಗೆ ಒಂದು ಹೊಸ ಅವತಾರ, ಹೊಸ ಸ್ವರೂಪವನ್ನೇ ನೀಡಿದ. ನಮ್ಮ ಜನರಲ್ಲಿ ದೈವದ ಬಗೆಗೆ ಇರುವ ಅಪಾರ ಭಕ್ತಿಯನ್ನು ಗಮನಿಸಿದ ಕವಿ, ಭಾರತಮಾತೆಯನ್ನು ಪೂಜ್ಯ ಸ್ಥಾನಕ್ಕೇರಿಸಿ ಲಾವಣಿ ರಚಿಸಿ ಭಾವುಕರಿಗೆ ದೇಶಭಕ್ತಿಯ ಪರಿಚಯ ಮಾಡಿಕೊಟ್ಟ.



**ಭಾರತ ಮಾತೆ ನೀನು**
**ತೋರೆ ಕರುಣವನ್ನು**
**ಬಾರಿ ಬಾರಿಗೆ ನಾನು**
**ಸ್ಮರಣೆ ಮಾಡುವೆನು**
**ಪರಿಪಾಲಿಸ ಜನನಿ**
**ಮರಿಯದೆ ಪೊರೆಯೆ ನರನ ವಾಣಿ ॥**
**ಮೇರು ಪರ್ವತವನ್ನು**
**ಕಿರೀಟ ಮಾಡಿದಿ ನೀನು**
**ಕ್ಷೀರ ಸಮುದ್ರವನ್ನು**
**ಸೀರಿ ಉಟ್ಟೆವ್ವ ನೀನು**
**ಮೂರು ಲೋಕದ ಜ್ಞಾನಿ**
**ಪಾರಮಾಡ ಸರ್ವರ ಸಂಪನ್ನಿ ॥**

ಗ್ರಾಮೀಣ ಭಾಗದ ಜನರು ದೈವವಾಗಿ ನಂಬಿದ್ದು ಭೂಮಿತಾಯಿಯನ್ನು. ಇಂಥ ಭೂಮಿತಾಯಿಯಲ್ಲಿ ಭೀಮಕವಿ ಹೀಗೆ ಬಿನ್ನವಿಸಿಕೊಳ್ಳುತ್ತಾನೆ.

**ಸ್ತುತಿಗೈವೆ ಭೂಮಿತಾಯಿ**
**ಮತಿನೀಯೆ ಜಗನ್ಮಾಯಿ**
**ಅತಿ ವ್ಯಥೆಯಾದ ಸುತನಾ**
**ಭಾರತಮಾತೆ ಗತಿಯ ಹಚ್ಚಬೇಕ ನೀನಾ**

ಭೂಮಿ ತಾಯಿಯಲ್ಲಿ ಪ್ರಾರ್ಥಿಸಿಕೊಳ್ಳುತ್ತ ಭೀಮಕವಿ ಬ್ರಿಟಿಷರು ನಮ್ಮ ಜನರ ಮೇಲೆ ಮಾಡುವ ಶೋಷಣೆ ದಬ್ಬಾಳಿಕೆಗಳನ್ನು ತುಂಬ ಪರಿಣಾಮಕಾರಿಯಾಗಿ ತನ್ನ ಪದಗಳಲ್ಲಿ ಪ್ರಸ್ತಾಪಿಸುತ್ತಾನೆ.

**ಕೆಲಸಕ್ಕೆ ಅವರು ನೇಮಣೂಕಿ ಆದಮ್ಯಾಲ**
**ಪಗಾರ ಅಲ್ಲದೆ ಬ್ಯಾರೆ ಸುಲಿಯುವರಾ**
**ಇಂಗ್ಲಂಡದಿಂದ ಹಿಂದುಸ್ತಾನಕ ಬರುವುದಕ**
**ಹಾದಿ ಖರ್ಚ ಮೂವತ್ತ ಸಾವಿರಾ॥**

**ಇಂಗ್ಲಂಡದೊಳಗ ಅವರ ಹೆಂಡರ ಹಡದರ**
**ಬಾಣೆತನಕ ಕೊಡಬೇಕ ನೀವೆಲ್ಲರಾ**
**ಒಂದು ಲಕ್ಷ ಎಂಟು ಸಾವಿರ ಮೋಟೋರಕ್ಕ ಕೊಡಬೇಕ**
**ಅದರಾಗ ಕೂತಗೊಂಡ ಮೆರಿಯುವರಾ**

ಭಾರತದಂತಹ ಬಡದೇಶಕ್ಕೆ ಬಂದ ಬ್ರಿಟಿಷ್ ಅಧಿಕಾರಿಗಳು ಈ ದೇಶದ ಜನರನ್ನು ಸುಲಿದು ಹೇಗೆಲ್ಲ ಮೆರೆಯುತ್ತಿದ್ದಾರೆ ಎಂಬುದನ್ನು ಭೀಮಕವಿ ಸ್ವಾರಸ್ಯವಾಗಿ ಹೇಳಿದ್ದಾನೆ. ಹೀಗೆ ಹೇಳಿದಾಗ ಜನರ ಮನಸ್ಸಿನಲ್ಲಿ ಪರಿಣಾಮ ಬೀರುತ್ತಿತ್ತು.

ಆಂಗ್ಲರನ್ನು ಕೆಂಪು ಮುಖದ ಕೋತಿಯನ್ನಾಗಿ ಚಿತ್ರಿಸಿ, ಜನರಲ್ಲಿ ಅವರ ಬಗ್ಗೆ ಕೀಳರಿಮೆ ಹುಟ್ಟುವಂತೆ ಮಾಡಿದ ಲಾವಣಿಯೂ ಒಂದು ಆ ಕಾಲದಲ್ಲಿ ತುಂಬ ಪ್ರಸಿದ್ಧವಾಗಿತ್ತು.

**ಮಂಗನ್ನ ನೋಡಿದೆನೋ ನಾನೊಂದು**
**ಕೆಂಪ ಮಾರಿಯ । ಮಂಗನ್ನ ನೋಡಿದೆನೋ**
**ಮಂಗನ್ನ ನೋಡಿದೆ ಹಂಗಿಲ್ಲ ಯಾರದು**
**ಹಿಂದುಸ್ತಾನದ ಅನ್ನಾತಿನ್ನೋ ಹಂದಿಕುಲದ । ಮಂಗನ**
**ಕಾಲು ಕುಬಸದ ಮಂಗ । ಮ್ಯಾಲೆ ಟೊಪ್ಪಿಗುಳ್ಳ ಮಂಗ**
**ಹಾಲುಂಡ ದೇಶದ ಮ್ಯಾಲೆ ಹಲ್ಲೆ ಮಾಡಿತೋ ಮಂಗ ।**
**ಮೀಸಿ ಇಲ್ಲದ ಮಂಗ । ವಿಶ್ವಾಸಗೇಡಿ ಮಂಗ**
**ಹಿಂದುಸ್ತಾನದ ಹೇಸಿಗೆ ತಿನ್ನೋ ಮಂಗ**

ಶಾಲೆ ಕಲಿಯದ ಮುಗ್ಧ ಹಳ್ಳಿಗರಿಗೂ ಈ ಲಾವಣಿ ಬ್ರಿಟಿಷರ ಶೋಷಣೆ–ದಬ್ಬಾಳಿಕೆಯನ್ನು ತುಂಬ ಅರ್ಥಪೂರ್ಣವಾಗಿ ತಿಳಿಸುತ್ತಿತ್ತು.

ಭೀಮಕವಿಯು 'ಚೆನ್ನಮ್ಮನ ವೀರವೃತ್ತಿ' ಕುರಿತು ಹೀಗೆ ಬರೆದಿದ್ದಾನೆ:

**ಕನ್ನಡ ನಾಡಿನ ಅಧಿಕಾರ ಕನ್ನಡತಿ ಮಾಡತಿದ್ಲ**
**ಫಿರಂಗ್ಯಾರದೇನ ಹೋಗತಿತ್ತ ಗಂಟಾ.... ಗೀಯಗಾ ಗೀಯಗಾ**
**ಕನ್ನಡ ಸಂಸ್ಥಾನ ಮೇಲೆ ಕಾರಭಾರ ಮಾಡಲಿಕ್ಕೆ ಬಂದ**



**ಥಾಕರೆ ಸಾಹೇಬ ಹೊಡದ ಲಾಗಾಟಾ......ಗೀಯಗಾ....**
**ಹನ್ನೆರಡು ಜನ ಅರಸರು, ಇನ್ನೂರ ಮೂವತ್ತೊಂಬತ್ತ ವರುಷ**
**ಚೆನ್ನಾಗಿ ರಾಜ್ಯ ಆಳಿದರು ಕಿತ್ತೂರಿಗೆ**
**ಅನ್ಯರ ಕಾಟವಿಲ್ಲ ಅನ್ಯಾಯ ಏನೂ ಇಲ್ಲ**
**ಸನ್ಮಾರ್ಗದಿಂದ ಸುಖರೂಪವಾಗಿ**
**ಮುನ್ನೂರ ಐವತ್ತೆಂಟ ಹಳ್ಳಿ ಎಪ್ಪತ್ತೆರಡು ಕೋಟಿಗಳು**
**ಉತ್ಪನ್ನ ಏಳಲಕ್ಷಕ್ಕಿಂತ ಮಿಗಿಲಾಗಿ**
**ಧನದೌಲತ ಆನೆ ಒಂಟಿಕುದುರಿಗಳು ಹತಾರು ಬಂದೂಕ**
**ತೋಫ್ ಮೂಲಿ ಮೂಲಿಗೀ**
**ಕನ್ಯಾಶಿರೋಮಣಿ ಚನ್ನಮ್ಮರಾಣಿ ಆಳತಿದ್ಲ ಸಂಸ್ಥಾನಕ**
**ವಾರಸಪುತ್ರ ಇಲ್ಲದ್ದಕ್ಕಾಗಿ  ಗೀ ಗೀ**
**ಸನ್ ಹದಿನೆಂಟನೂರ ಇಪ್ಪತ್ನಾಲ್ಕನೆ ಇಸ್ವಿಯಲ್ಲಿ ದುರಾಸೆ**
**ಹುಟ್ಟಿತ ಆ ಫಿರಂಗ್ಯಾರಿಗಿ  ...... ಗೀಗೀ**
**ಹನ್ನೊಂದ ಹಳ್ಳಿ ಇನಾಮ ಹಾಕಿ ಉಂಣಲಿಕ್ಕೆ ಕೊಡತೀವ**
**ಬಾಕಿದೆಲ್ಲ ಬಿಡ ಅಂದ್ರ ಚನ್ನಮ್ಮಾಜಿಗಿ ....ಗೀಗೀ**
**ನನ್ನೀ ಸಂಸ್ಥಾನ ಮೇಲೆ ನಿಮ್ಮದೇನ ಹಕ್ಕ ಅಂದ್ಳ**
**ಹೆಣ್ಣುಮಗಳು ಅಂಜಲಿಲ್ಲ ಬ್ರಿಟಿಷರಿಗಿ ಗೀಗೀ**

ಇಂತಹ ಸ್ವಾಭಿಮಾನಿ ಚನ್ನಮ್ಮ ಇನ್ನೊಬ್ಬರ ಹಂಗಿನಲ್ಲಿ ಇರುವವಳಲ್ಲ. ತನ್ನ ನೆಲದ ಹಿಡಿ ಮಣ್ಣನ್ನೂ ಅನ್ಯರಿಗೆ ಕೊಡುವವಳಲ್ಲ, ಛಲವಾದಿ ಎಂಬುದನ್ನು ಇಲ್ಲಿ ಪ್ರತಿಪಾದಿಸಿದ್ದಾರೆ.

ಹುಲಕುಂದ ಭೀಮಕವಿ ಒಂದು ಚಳುವಳಿ ಪದವನ್ನು ರಚಿಸಿದ್ದಾನೆ. ಅದರಲ್ಲಿ ಮಹಾಭಾರತದ ಪಾತ್ರ ಸನ್ನಿವೇಶಗಳನ್ನು ಸಮಕಾಲೀನ ನಾಯಕರು–ಸನ್ನಿವೇಶಗಳಿಗೆ ಹೋಲಿಸಿರುವುದನ್ನು ಕಾಣಬಹುದು. ಆ ಪದ್ಯವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**ಚಳುವಳಿ ಅಂದರೇನ ತಿಳಿಸಿ ಹೇಳತೇನ**
**ಕೂತ ಕೇಳರಿ ಸರ್ವಜನಾ**

ಬೇಕಾ ಬಿಟ್ಟಿ ತಿರುಗುವಂಥಾ ಜನರನ್ನ ಎಳಕೊಂಡ
ಬಾಳ್ವೆಕ ಹಚ್ಚೋದು ಚಳುವಳಿರಣ್ಣಾ॥
ಕಟಪಟ ಮಾಡಿ ನಿಮ್ಮ ಚಟಗಳ ಬಿಡಿಸಲಿಕ್ಕೆ
ಕೈಕಾಲ ಬೀಳುವದು ಒಂದೇ ಸವನಾ
ಸಟಿ ಮಾತ ಅಲ್ಲ ಸತ್ಯ ತಿಳಿಯಿರಿ
ರಾಷ್ಟ್ರಕ್ಕಾಗಿ ಆಗೋದು ಸಣ್ಣಾ॥
ಅರೆಹೊಟ್ಟೆ ಉಣ್ಣುವವರಿಗೆ ಪೂರಾ ಕೊಡಿಸಲಿಕ್ಕೆ
ಘೋರ ಬಿಟ್ಟ ಮಾಡೋದು ಕದನಾ
ಹಿರಿಯರ ಸಂಪತ್ತಿನಿಂದ ಮೆರೆಯುವ ಜನರಿಗೆ
ಗುರುಬೋಧ ಕೊಡುವುದು ದಿನಾದಿನಾ॥
ಸಣ್ಣವರ ದೊಡ್ಡವರ ಭಿನ್ನಭೇದವಿಲ್ಲ
ಮನ್ನಣೆ ಕೊಡುವುದು ಸಂಪೂರ್ಣ
ಉನ್ನತ ಖಾದಿಯ ಚೆನ್ನಾಗಿ ಧರಿಸಿ
ಚಿನ್ನದಂತೆ ಇರುವುದು ಹಸನಾ॥
ಕೌರವರ ಗುಣದ ಫಿರಂಗ್ಯಾರ ಕೈಯಾಗ ಸಿಕ್ಕ
ಸೆರೆಯಾಳಗಿತ್ತ ಇಲ್ಲಿತನಾ
ಪಾಂಡವರಂತೆ ವನವಾಸ ಸೋಸಿ
ಮರಮರಗಿ ಆದೀತ ಜೀರ್ಣ
ಶಕುನಿಯಂಥಾ ಭಾರತ ಮಂತ್ರಿ ಕುಟಿಲತಂತ್ರದಿಂದ
ಕೆಳದಿಟ್ಟ ಭಾರತ ಮಾತೆಯನಾ
ತುರಂಗ ಎಂಬುವ ಅರಗಿನ ಮನೆಯಿಂದ
ಪಾರಾಗಿ ಬಂತ ಆಗಲಿಲ್ಲ ಏನಾ॥

ಚಾಲ: ಸ್ವಯಂ ಸೇವಕರಾಗಿ ತಿರಕೊಂಡಾ
ಪಾಂಡವರಂತೆ ಆತ ಬಾಳಬಂಡಾ
ಮನಿ ಮನಿ ಭಿಕ್ಷಾ ಇಸಗೊಂಡಾ
ತಿಳಿಸುವದ ಬೇಕಾದಲ್ಲಿ ಉಂಡಾ
ಎಷ್ಟೋ ಮಂದೀವ ಹೋದಾವ ರುಂಡಾ



ಎಡಗೈಯ್ಯಾಗ ಜೀವಾ ಹಿಡಕೊಂಡಾ।

ಏರ : ನೋಡಿದಿರಿ ನೀವು ಕೂಡಾ ಅಭಿಮನ್ಯುನಂಥ ಮಿಗಿಲಾದವನೊಬ್ಬ
ಭಗತಸಿಂಗ್‌ನು ಕೊಟ್ಟನು ಪ್ರಾಣ
ಭೀಮಸೇನನಂತೆ ಆರ್ಭಾಟ ಮಾಡುವ
ಸುಭಾಸ ಬೋಸರು ರಾಷ್ಟ್ರಪತಿ

ಇಲ್ಲಿ ಭೀಮಕವಿ ಭಗತ್‌ಸಿಂಗನನ್ನು ಅಭಿಮನ್ಯುವಿಗೆ ಹೋಲಿಸಿದರೆ ಸುಭಾಸಚಂದ್ರ ಬೋಸರನ್ನು ಭೀಮನಿಗೆ ಹೋಲಿಸುತ್ತಾನೆ. ಪಾಂಡವರಂತೆ ಭಾರತೀಯರೆಲ್ಲ ವನವಾಸ ಸೋಸುವುದು ಬಂದಿತ್ತೆಂದು ಕವಿ ಮರಗುತ್ತಾನೆ. ಮುಂದುವರಿದು ಮಹಾಭಾರತದ ಪಾತ್ರಗಳನ್ನು ಹೀಗೆ ವಿವರಿಸುತ್ತಾನೆ.

ಧರ್ಮರಾಜನಂತೆ ಸೌಮ್ಯಗುಣದವ
ಅಬ್ದುಲ್ ಗಫಾರಖಾನ ಮಹಾಮೂರ್ತಿ
ನಕುಲ ಸಹದೇವರೆಂಬೊ ಸ್ವಯಂ ಸೇವಕರು
ಹಗಲಿ ರಾತ್ರಿ ಮಾಡತಾರ ಚಿಂತಿ
ದ್ರೌಪದಿ ತಾಯಿಯೆಂಬ ಸ್ವತಂತ್ರ ಭೂದೇವಿಯ
ಮಾನ ಉಳಿಸೋದಕ್ಕ ಮಾಡತಾರ ಯುಕ್ತಿ
ಕೃಷ್ಣಪರಮಾತ್ಮನಂತೆ ಮಹಾತ್ಮಾ ಗಾಂಧಿಯವರು
ತಯಾರಾಗಿ ನಿಂತಾರ ಸಾರಥಿ॥
ಕುದುರಿರಥಾ ಹೊಂಟಾಂಗ ಆ ಕ್ಷಣಕ
ಲಗಾಮ ತಗೊಂಡಾನ ತನ್ನ ಹಂತಿ
ರಾಟಿಯೆಂಬೊ ಸುದರ್ಶನ ಚಕ್ರವ ತಿರವತಾನ
ಬಿಟ್ಟೂ ಬಿಡದೆ ಆವ ದಿನಂಪ್ರತಿ

ಇಲ್ಲಿ ಮಹಾತ್ಮಾ ಗಾಂಧೀಜಿಯವರನ್ನು ಶ್ರೀಕೃಷ್ಣ ಪರಮಾತ್ಮನಿಗೆ ಹೋಲಿಸಿ, ಚರಕಾವನ್ನು ಸುದರ್ಶನ ಚಕ್ರಕ್ಕೆ ಹೋಲಿಸಿರುವುದು ವಿಶೇಷವಾಗಿದೆ.

ತಮ್ಮ ದೇಶದ ಅನ್ನಾ ತಾವು ತಿಂದು
ಫಿರಂಗ್ಯಾರ ಬೆನ್ನ ಕಟ್ಟುವರಾ

**ಪ್ರಜಾಸತ್ತಾತ್ಮಕ ರಾಜ್ಯ ಆಗಲೆಂತ**
**ಸಂಸ್ಥಾನ ಪ್ರಜೆಗಳು ಅನ್ನುವರಾ॥**
**ದೂರ ಯಾಕ ಮೈಸೂರು ಸಂಸ್ಥಾನದಾಗ**
**ವಿದುರಾಶ್ವತ್ಥದಲ್ಲಿ ಆತ ಅತ್ಯಾಚಾರ**
**ಚಳುವಳಿ ಮಾಡುವ ಪ್ರಜೆಗಳ ಮೇಲೆ**
**ಅಪಘಾತ ಮಾಡಿದರ ಗೋಳಿಬಾರಾ॥**
**ಮೂವತ್ತೆರಡು ಮಂದಿ ಪ್ರಾಣ ಬಿಟ್ಟರಾ**
**ನಾಲ್ವತ್ತೆಂಟು ಮಂದಿ ಗಾಯ ಹೊಂದಿದರಾ**
**ಅಲ್ಲೋಲ ಕಲ್ಲೋಲವಾಗಿ ವಲ್ಲಭಭಾಯಿಯವರು**
**ಸಲ್ಲಾ ಮಾಡಿ ಧ್ವಜಾ ಏರಿಸಿದರು.**
**ಇದನ್ನ ನೋಡಿ ಜಮಖಂಡಿ ಸಂಸ್ಥಾನಾ**
**ಅಪ್ಪಾಸಾಹೇಬ ತಗದಾನ ರಚನಾ**
**ಪ್ರಜಾ ಅಧ್ಯಕ್ಷರ ಕರಿಸ್ಯಾನಾ**
**ಅಲ್ಪ ಸ್ವಲ್ಪ ಸವಲತ್ತ ಮಾಡಿದಾನಾ**
**ಉಳಿಕಿದವರು ತೆರಿದರಪ್ಪಾ ಕಣ್ಣಾ**
**ಒಳಗಿಂದೊಳಗೆ ನಡಿಸ್ಯಾರ ಕಲ್ಪನಾ॥**
**ಸ್ವರಾಜ್ಯ ದೊರೆ ದೊರೆಯುವದೆಂದು**
**ಭೀಮರಾಯ ಮಾಡಿದ ಕವನಾ**
**(ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು, ಪು. ೩೮–೪೦)**

ಕನ್ನಡ ಲಾವಣಿಗಳ ಬಗೆಗೆ ಹೇಳುವುದಾದರೆ ಇವು ಉತ್ತರ ಕರ್ನಾಟಕದ ಕೊಡುಗೆಯಾಗಿವೆ. ಡಾ. ಫ್ಲೀಟ್ (ಕ್ರಿ.ಶ. ೧೮೮೫–೧೯೮೯)ರ ಅವಧಿಯಲ್ಲಿ 'ಇಂಡಿಯನ್ ಎಂಟಿಕ್ವರಿ' ಪತ್ರಿಕೆಯಲ್ಲಿ ಪ್ರಕಟಿಸಿದ ಲಾವಣಿಗಳು ಪ್ರಾರಂಭದ ಲಾವಣಿಗಳು ಎಂದು ಹೇಳಬಹುದು.

ರಾಷ್ಟ್ರೀಯ ಚಳುವಳಿಗೆ ನಾನಾ ಮುಖಗಳಿದ್ದವು. ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಖಾದಿ ಧರಿಸುವುದು ಇತ್ಯಾದಿ. ಇವನ್ನೆಲ್ಲ ಕುರಿತು ಲಾವಣಿ ಪದಗಳು ರಚನೆಗೊಂಡಿವೆ. ಹಳ್ಳಿಗರಿಗೆ ಮನವರಿಕೆಯಾಗುವಂತೆ ಈ ವಿಷಯಗಳನ್ನು ತಿಳಿಸುವುದು ಪ್ರಯಾಸದ ಕೆಲಸವಾಗಿತ್ತು. ಶತಶತಮಾನಗಳಿಂದ ಬೆಳೆದು ಬಂದಿರುವ ಅಸ್ಪೃಶ್ಯತೆಯ ಬಗ್ಗೆ ತಿಳಿ ಹೇಳುವುದು ಎಷ್ಟೋ ಸಲ ಅಪಾಯಕಾರಿಯೆನಿಸಿತ್ತು. ಇಂಥ ಸೂಕ್ಷ್ಮ ವಿಷಯವನ್ನು ಭೀಮಕವಿ ನೇರವಾಗಿ ಸೋದಾಹರಣವಾಗಿ ತರ್ಕಬದ್ಧವಾಗಿ ನಿರೂಪಿಸಿರುವುದನ್ನು ಈ ಕೆಳಗಿನ ಲಾವಣಿಯಲ್ಲಿ ಕಾಣಬಹುದು.

**ಎಲ್ಲಿ ಕೂತಿತ್ತ ಯಾವ ಕಡಿಯಿಂದ ಬಂತ**
**ಏನೇನ ಮಾಡಿತ ಚಳವಳಿ**
**ಎಲ್ಲಾ ಜಾತಿ ಕೂಡಿ ಏಕ ಆಗುದಂತ ನಮಗೆ**
**ಬಂದತರಿ ಎಂಥ ಬಗಳಿ ॥ಪ॥**
**ಹಿಂಗ ಅನ್ನುವವರು ತುಂಬಿದಾರ ನಾಡಾಗ**
**ಧರ್ಮದ ಅಭಿಮಾನ ಅವರಿಗೆ ಹೆಚ್ಚ**
**ಹೆಂಗ ಮಾಡೂನ ಇನ್ನ ಕಾಂಗ್ರೆಸ್‌ದವರು**
**ತಂದ ಇಟ್ಟಾರಂತಾರ ಪೇಚ**
**ಹರಿಜನರ ಕಂಡರ ದೂರ ಸರಿಯತಾರ**
**ಮುಟ್ಟಬೇಡಂತಾರ ಸ್ವಚ್ಛ**
**ಹೊರಗ ಹೋದಲ್ಲಿ ಮರತಿರತಾರ ಕುಲಾ**
**ಮನಿಗಿ ಬಂದ ಆಗತಾರ ಊಚ**
**ಮೋಟರದಾಗ ಇವರನ್ನ ತುರುಕಿ**
**ತುಳೀಲಿಕ್ಕೆ ಹತ್ತರತಾರ ಕಚಾಪಚಾ**
**ಏಟು ಉಳಿಯೋದಿಲ್ಲ ಕೈಯ್ಯಾನ ರೊಕ್ಕ**
**ಮೈಯ್ಯಲ್ಲಾ ಆಗತದ ನುಚ್ಚನುಚ್ಚಾ॥**
**ಚಹಾದ ಅಂಗಡಿ ಹೊಕ್ಕ ಏಕಾಗಿ**
**ಮನಿಯಾಗ ಆಗಿರತಾರ ದೊಡ್ಡ ಯೋಗಿ**
**ಹೇಳಿದರ ಬರತೈತಿ ನಗೀ**
**ನಾಚಿಕೆ ಇಲ್ಲರಿ ಇವರೀಗಿ**
**ಎಲ್ಲಾ ಜಾತಿಯವರು ಕೂಡಿ ಏಕಾಗಿ**

**ಶಿಂದಿ ಮಗಿ ಹಚ್ಚುವರು ಬಾಯಿಗಿ**
**ಹರಿಜನರನ್ನ ನೆಲದ ಮೇಲಿಟ್ಟ**
**ಉಳಿದವರು ಅದಾರೇನು ಅಂತರಾಳಿ**

ಸ್ವಾತಂತ್ರ್ಯ ಚಳುವಳಿಯ ಒಂದು ಅಂಗವಾಗಿ ನಡೆದ ಅಸ್ಪೃಶ್ಯತಾ ನಿವಾರಣೆಯ ಹೋರಾಟವನ್ನು ಸಂಪ್ರದಾಯಸ್ಥರು ವಿರೋಧಿಸಿದ್ದು ಸಹಜವೇ. ಇಂಥ ವಿರೋಧವನ್ನು ಕಾಂಗ್ರೆಸ್ ಉಪಾಯವಾಗಿ ಎದುರಿಸಬೇಕಾಯಿತು. ಈ ಎಲ್ಲ ಅಂಶಗಳು ಮೇಲಿನ ಲಾವಣಿಯಲ್ಲಿ ವಿವರಿಸಲ್ಪಟ್ಟಿವೆ.

ಅಂದು ಚರಕ ದೇಶಭಕ್ತಿಗೆ ಸಂಕೇತವಾಗಿತ್ತು. ಸ್ಥಳೀಯ ಗೃಹ ಕೈಗಾರಿಕೆಗಳನ್ನು ದಿವಾಳಿಯೆಬ್ಬಿಸಿ ಅಟ್ಟಹಾಸದಿಂದ ಮೆರೆಯುತ್ತಿದ್ದ ಬ್ರಿಟಿಷ್ ಆಡಳಿತಶಾಹಿಗೆ ಪ್ರತಿರೋಧವೆಂಬಂತೆ ಗಾಂಧೀಜಿ ಚರಕ ರೂಢಿಗೆ ತಂದರು. ಅದು ಏಕಕಾಲಕ್ಕೆ ಸ್ವಾವಲಂಬನೆ ಮತ್ತು ಶೋಷಣೆಯಿಂದ ಬಿಡುಗಡೆ ಎರಡನ್ನೂ ಸಾಧಿಸುವ ಸಾಮರ್ಥ್ಯ ಪಡೆದಿತ್ತು. ಅಂಥ ಚರಕದ ಮಹತ್ವವನ್ನು ಭೀಮಕವಿ ಹೀಗೆ ಹೇಳುತ್ತಾನೆ.

**ಗಿರಣಿ ಬಂದಾಗಿನಿಂದ ಬರಲಿಲ್ಲ ಮುಂದಕ**
**ಮೂಲಿಗಿ ಬಿದ್ದಿತ ನಮ ಚರಕ**
**ಗಾಂಧಿ ಮಹಾರಾಜರು ತಂದಾರ ಬೈಲಿಗೆ**
**ಚಾಲು ಮಾಡಲಾಕ ಈ ಚರಕ॥**
**ನೇಕಾರ ಜನರಿಗೆ ತವರೂರ ಇದ್ದಂಗ**
**ಬೇಕಾದ ಕೊಡುವುದು ಈ ಚರಕ**
**ರೈತರ ಮನಿಯಾಗ ಸ್ಥಿರವಾಗಿ ನಡೆದರ**
**ಪಕ್ವಾನ್ನನ ಉಣಿಸುವುದು ಈ ಚರಕ ॥**

ಎಂದು ವಿವರಿಸಿದ್ದಾನೆ. ಚರಕದಿಂದ ಉತ್ಪನ್ನವಾಗುವ ಖಾದಿ ಅತ್ಯಂತ ಶ್ರೇಷ್ಠವಾದುದು. ಅದು ಪರಿಶ್ರಮ ಮತ್ತು ಸ್ವಾವಲಂಬನೆಗಳಿಗೆ ಸಂಕೇತ ವಾಗಿರುವಂಥದು. ನಿಜ. ಆದರೆ ಗಿರಣಿ ಬಟ್ಟೆಯ ಮುಂದೆ ಖಾದಿ ಒರಟಾಗಿ ಕಾಣುತ್ತಿತ್ತು. ಖಾದಿಯ ತಾತ್ವಿಕತೆ ಅರಿಯಲಾರದವರು ಗಿರಣಿ ಬಟ್ಟೆಗೆ ಮೋಹಗೊಳ್ಳುವುದು ಸಹಜ. ಇಂಥವರಿಗೆ ಎಚ್ಚರಿಕೆ ತಿಳುವಳಿಕೆಗಳೆರಡನ್ನು ನೀಡುವ ಕಾರ್ಯವನ್ನು ಭೀಮಕವಿ ತನ್ನ ಲಾವಣಿಗಳ ಮೂಲಕ ಮಾಡಿದ.



**ಖರೆ ಖರೆ ಹೇಳತೀನಿ ಬರಬರತ ದಿನಮಾನ**
**ಬರತಾವ ಬಾಳ ಚಂದ**
**ಪರದೇಶಿ ಗಿರಣಿ ಅರಿವಿ ಧರಿಸುವವರಿಗೆ**
**ಅಬರು ಇಲ್ಲರಿ ಮುಂದ॥**
**ಆರು ದುಡ್ಡಿನ ಖಾದಿ ಟೊಪ್ಪಿಗೆಗೆ**
**ಮುಂದ ಆರ್ಭಾಟ ಹೆಚ್ಚಿಂದ**
**ಅರವತ್ತು ರೂಪಾಯಿ ಜರದ ರುಮಾಲದವರು**
**ಕೊರವರಕ್ಕಿಂತ ಹಿಂದ॥**
**ಇರುವಂಥಾ ಅರಿವಿ ಹರದ ಮ್ಯಾಲ ಇನ್ನ**
**ತರೋದ ಮಾಡಿರಿ ಬಂದ**
**ತರುವಂಥಾ ಜನರಿಗೆ ಅರುವಿರಲೆಂತ**
**ಹೇಳುವೆ ಕರ ಮುಗಿದ॥**

ಭೀಮಕವಿ ಹೀಗೆ ಖಾದಿಯ ಮಹತ್ವವನ್ನು ಮುಂದೆ ಅದು ಗಳಿಸಿ ಕೊಳ್ಳಬಹುದಾದ ಸ್ಥಾನಮಾನವನ್ನು ಭರವಸೆಯಿಂದ ವಿವರಿಸಿದ್ದಾನೆ. ಗಿರಣಿ ಬಟ್ಟೆಯನ್ನು ತ್ಯಜಿಸಲು ಕಳಕಳಿಯಿಂದ ವಿನಂತಿಸಿಕೊಂಡಿದ್ದಾನೆ.

ಖಾದಿ ಟೊಪ್ಪಿಗೆಗೆ ಗಾಂಧಿ ಟೊಪ್ಪಿಗೆ ಎಂದು ಹೆಸರು ಬಂದಿತು. ಗಾಂಧಿ ಟೊಪ್ಪಿಗೆ ಧರಿಸುವುದು ದೇಶಭಕ್ತನ ಲಕ್ಷಣವಾಗಿತ್ತು. ಆ ಟೊಪ್ಪಿಗೆ ಗಾಂಧೀಜಿಯ ಸಾಧನೆಗಳಿಗೆ ದ್ಯೋತಕವಾಗಿ ರಾಷ್ಟ್ರೀಯ ಹೋರಾಟಗಳಿಗೆ ಪ್ರೇರಕ ಶಕ್ತಿಯಾಗಿ ವಿಜೃಂಭಿಸಿತು. ಅಂದಿನ ಆಡಳಿತಶಾಹಿ ಗಾಂಧಿ ಟೊಪ್ಪಿಗೆ ಕಂಡರೆ ಹೆದರುವ ಪರಿಸ್ಥಿತಿ ಉಂಟಾಯಿತು. ಅಂಥ ಟೊಪ್ಪಿಗೆಯ ಬಗ್ಗೆ ರಚಿಸಿರುವ ಭೀಮಕವಿಯ ಪದವೊಂದು ಹೀಗಿದೆ–

**ಟೊಪ್ಪಿಗಿ ಹಾಕಿದೆನೊ ನಾನೊಂದು**
**ಟೊಪಿಗಿ ಹಾಕಿದನೋ॥**

**ದಕ್ಷಿಣಾಫ್ರಿಕಕ ಹೋದ ಟೊಪಿಗಿ**
**ಭಂಗಿ ಕೆಲಸಾ ಅಲ್ಲಿ ಮಾಡಿದ ಟೊಪಿಗಿ**
**ಫಿಜಿಯೊಳು ಕಲ್ಲ ವಡದ ಟೊಪಿಗಿ**
**ಯರೋಡಾ ಜೇಲದೊಳಗ ಬೀಸಿದ ಟೊಪಿಗಿ॥**
**ರಾಜವಾಡೆದಾಗ ಹೋದ ಟೊಪಿಗಿ**
**ರಾಜನ ಮುಂಗೈ ಹಿಡಿದ ಟೊಪಿಗಿ**
**ಅರಮನಿಯೊಳಗ ಹೋಗಿ ಬಂದ ಟೊಪಿಗಿ**
**ರಾವುಂಡ ಟೇಬಲದಾಗ ಮೆರೆದ ಟೊಪಿಗಿ॥**
**ಸತ್ಯಮಾರ್ಗವ ಹಿಡಿಸುವ ಟೊಪಿಗಿ**
**ಸತ್ಯಾಗ್ರಹವ ಮಾಡಿದ ಟೊಪಿಗಿ**
**ಭೃತ್ಯ ಕೆಲಸ ಮಾಡುವ ಟೊಪಿಗಿ**
**ಮಿಥ್ಯ ಅಲ್ಲ ಮಹಾತ್ಮನ ಟೊಪಿಗಿ॥**
**ಕೈಯ ನೂಲಿನದು ಖಾದಿ ಟೊಪಿಗಿ**
**ಕೈಗಾರಿಕೆಯ ಕಲಿಸುವ ಟೊಪಿಗಿ**
**ಭೀಮಸಿಂಗಗ ಒಲದ ಟೊಪಿಗಿ**
**ಚೆಂದವಾದ ಬಿಳೆ ಗಾಂಧಿ ಟೊಪಿಗಿ॥**

ಜನರನ್ನು ಚಳುವಳಿಗೆ ಪ್ರೇರೇಪಿಸುವುದರೊಂದಿಗೆ ರಾಷ್ಟ್ರೀಯ ಜೀವನದ ಆಗುಹೋಗುಗಳನ್ನು ಹಾಡಿನ ರೂಪದಲ್ಲಿ ತಿಳಿಸುವ ಜವಾಬ್ದಾರಿಯನ್ನು ಭೀಮಕವಿಗಳು ಇಲ್ಲಿ ಮಾಡಿದ್ದಾರೆ. ಗಾಂಧೀಜಿಯವರ ಜೀವನದ ಪ್ರಮುಖ ಘಟನೆಗಳ ಬಗ್ಗೆ, ಅವರು ಕೈಕೊಂಡ ವಿಧಾಯಕ ಕಾರ್ಯಗಳ ಬಗ್ಗೆ, ನಡುಗಾಲ ಸರ್ಕಾರಿ ರಚನೆ ಮತ್ತು ಅದರ ಸಾಧನೆಗಳ ಬಗ್ಗೆ ಅಲ್ಲಲ್ಲಿ ನಡೆಯುತ್ತಿದ್ದ ಪಿಕೆಟಿಂಗ್ ಘರ್ಷಣೆಗಳ ಬಗ್ಗೆ ಹಾಡು ರಚಿಸಿದ್ದಾರೆ. ರಾಷ್ಟ್ರೀಯ ನಾಯಕರಾದ ಗಾಂಧೀಜಿ, ಸುಭಾಷ್ ಚಂದ್ರಬೋಸ್ ಮೊದಲಾದವರನ್ನು ಕುರಿತು ಬಹಳಷ್ಟು ಹಾಡುಗಳು ಹುಟ್ಟಿಕೊಂಡಿವೆ. ಈ ನಾಯಕರ ಪೌರಾಣೀಕರಣ ಕುತೂಹಲಪೂರ್ಣವಾಗಿದೆ. ಜನಸಾಮಾನ್ಯರಿಗಾಗಿ ಅವರನ್ನು ಪುರಾಣದ ವ್ಯಕ್ತಿಗಳೊಡನೆ ಸಮೀಕರಿಸಬೇಕಾಯ್ತು. ಸುಭಾಷ್‌ರ ಸಾಹಸ ಜೀವನ ಲಾವಣಿ ಕವಿಗಳ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿದೆ. ಅಂದಿನ ಹೋರಾಟದ ಸಂದರ್ಭದಲ್ಲಿ ಹುತಾತ್ಮರಾದ ಭಗತ್‌ಸಿಂಗ್, ಮೈಲಾರ ಮಹಾದೇವಪ್ಪನಂತವರ ಬಗ್ಗೆ ಹಾಡು ರಚಿಸಿ ಹಾಡಿದ್ದಾರೆ. ಐತಿಹಾಸಿಕ ವ್ಯಕ್ತಿಗಳಾದ ಸಂಗೊಳ್ಳಿ ರಾಯಣ್ಣ, ಕಿತ್ತೂರ ಚೆನ್ನಮ್ಮ ಮುಂತಾದವರ ಬಗೆಗಿನ ಹಾಡುಗಳು ದೇಶಭಕ್ತಿಯನ್ನು ಉದ್ದೀಪಿಸಲು ಕಾರಣವಾದವು.

**ಭೀಮಕವಿ ಶಿಷ್ಯ ಮರಿಕಲ್ಲ ಕವಿ**

ಗೀಗೀ ಮೇಳಗಳಿಗೆ ಒಂದು ಹೊಸದಿಕ್ಕು ತೋರಿಸಿದ ಮೇಧಾವಿ ಹುಲಕುಂದದ (ಬಸಪ್ಪ ಸಂಗಪ್ಪ ಬೆಟಗೇರಿ) ಭೀಮಕವಿ. ಆ ಮಾಸ್ತರರ ಸಂಪರ್ಕ ಹಿಂಡಲಗಾ ಜೈಲಿನಲ್ಲಿದ್ದ ಮರಿಕಲ್ಲಪ್ಪನವರಿಗೆ ಒದಗಿತು. ಸಮಾನ ಆಸಕ್ತಿ, ಅವರಿಬ್ಬರನ್ನೂ ಬಹುಬೇಗ ಹತ್ತಿರತಂದಿತು. ಹೀಗೆ " ....... ಮಾಸ್ತರರು ಮರಿಕಲ್ಲಪ್ಪನವರಿಗೆ ಗೀಗೀ ಗುರುಗಳಾಗಿ ಲಭ್ಯವಾದುದು ಒಂದು ಯೋಗಾಯೋಗ. (ಅವರು) ಜೇಲಿನಲ್ಲಿಯೇ ಗೀಗೀಮೇಳ ಕಟ್ಟಿದರು. ಈಗಾಗಲೇ ಒಂದಿಷ್ಟು ಲಾವಣಿ–ಗೀಗೀ ಸಂಸ್ಕಾರ ಪಡೆದಿದ್ದ ಮರಿಕಲ್ಲಪ್ಪನವರು ಸಮರ್ಥ ಹಿಮ್ಮೇಳದವರಾಗಿ ಮಾಸ್ತರರ ಮೇಳ ಸೇರಿಕೊಂಡರು. ಅಂದಿನಿಂದ ಮರಿಕಲ್ಲಪ್ಪನವರ ಅಭಿರುಚಿ ಬೇರೆಯಾಯಿತು." ಅದೇ ಅವಧಿಯಲ್ಲಿ ಅವರಿಗೆ, ಪಕ್ಕದ ಸೆಲ್‌ನಲ್ಲಿದ್ದ ಸಂಪಗಾವಿಯ ವಾಲಿ ಚೆನ್ನಪ್ಪನವರ ಪರಿಚಯವೂ ಆಯಿತು. ಮರಿಕಲ್ಲಕವಿಯ ಧೈರ್ಯ, ನಡಾವಳಿಯನ್ನು ಅವರು ತುಂಬಾ ಮೆಚ್ಚಿಕೊಂಡಿದ್ದರು. ತಾವು ಜೈಲಿನಿಂದ ಬಿಡುಗಡೆಯಾದಾಗ ಅವರು ಹೊದ್ದುಕೊಳ್ಳುತ್ತಿದ್ದ ರಗ್ಗಿನ ಎಳೆ ಹಿರಿದು ಜೈಲು ಆವರಣದಲ್ಲಿದ್ದ ಹೂವುಗಳಿಂದ ಮಾಲೆಮಾಡಿ ಹಾಕಿ ಬೀಳ್ಕೊಟ್ಟುದನ್ನು ಮರಿಕಲ್ಲಕವಿ ಸ್ಮರಿಸುತ್ತಿದ್ದರು. ಈ ಎಲ್ಲ ಅನುಭವಗಳನ್ನು ಅವರು ತಮ್ಮ'೪೨ರ ಚಳವಳಿ' ಗೀಗೀ ಹಾಡಿನಲ್ಲಿ ದಾಖಲಿಸಿದ್ದಾರೆ.

'ಕಿತ್ತೂರ ಚೆನ್ನಮ್ಮ'ಹಾಡು, ಸ್ವಾತಂತ್ರ್ಯಸಂಗ್ರಾಮಕ್ಕೆ ಕಿಡಿಯೂದಿದ ಧೀರ ಮಹಿಳೆಯ ಚರಿತ್ರೆ. ಆಂಗ್ಲರ ದಬ್ಬಾಳಿಕೆಯ ವಿರುದ್ಧ ಅವಳು ಹೋರಾಡಿದ ಘಟನಾವಳಿಗಳನ್ನು ಚರಿತ್ರೆಗೆ ಕುಂದುಬಾರದ ರೀತಿಯಲ್ಲಿ ಕವಿ ಮಂಡಿಸಿರುವುದನ್ನು ಇಲ್ಲಿ ನೋಡಬಹುದಾಗಿದೆ :

**ಕಿತ್ತೂರ ಸಂಸ್ಥಾನದೊಳು ರಾಜ್ಯಭಾರ ಮಾಡುವಂತಾ**
**ಶಿವಲಿಂಗ ಭೂಪ ಮರಣ ಹೊಂದಿದರಾ**
**ವಟ್ಟಗೂಡಿ ದತ್ತಕ ಮಾಡಿದರಾ।**
**ಕನ್ನೂರ ಮಲ್ಲಪ್ಪಸೆಟ್ಟಿ ಕಂಪನಿ ಸರಕಾರಕ್ಕ**
**ಒಳಗಿಂದೊಳಗ ಮಾಡಿದಾನ ಪಿತೂರಾ**
**ಬರದ ಪತ್ತರಾ॥**

ಈ ಮಲ್ಲಪ್ಪಸೆಟ್ಟಿಯ ಪತ್ರವೇ ಹೇಗೆ ಕಿತ್ತೂರು ಸಂಸ್ಥಾನದ ಮುಂದಿನ ಎಲ್ಲ ಕೇಡಿಗೆ, ಪತನಕ್ಕೆ ಕಾರಣವಾಯಿತೆನ್ನುವುದನ್ನು ಇನ್ನುಳಿದ ನುಡಿಗಳು ಸಮರ್ಥವಾಗಿ ವೇದ್ಯಗೊಳಿಸುತ್ತವೆ. ಐತಿಹಾಸಿಕ ಸಂಗತಿಗಳನ್ನು ಪುನಾರಚಿಸಿ ಹೇಳುವುದು ತುಂಬಾ ಅಪಾಯಕಾರಿಯಾದ ಕೆಲಸ. ಪಥ್ಯದ ಸರಿಯಾದ ತಿಳಿವಳಿಕೆ ಇಲ್ಲದಿದ್ದರೆ ನಿಶ್ಚಿತವಾಗಿಯೂ ಅದಕ್ಕೆ ನ್ಯಾಯವೊದಗಿಸಲು ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಮರಿಕಲ್ಲಕವಿಯದು ತುಂಬಾ ಎಚ್ಚರದ ನಡೆ ಎನ್ನುವುದನ್ನು ಇಂಥ ಹಾಡುಗಳು ಮನವರಿಕೆ ಮಾಡಿಸುತ್ತವೆ.

**ರಾಮದುರ್ಗ ದುರಂತ ಲಾವಣಿ : ಒಂದು ಚಾರಿತ್ರಿಕ ಕಥನ ಗೀತೆ**

ಜಾನಪದ ಸಾಹಿತ್ಯ ಪ್ರಕಾರದಲ್ಲಿ 'ಲಾವಣಿ' ತುಂಬ ಜನಪ್ರಿಯವಾದ ಪ್ರಕಾರವಾಗಿದೆ. ಅದರಲ್ಲೂ ಜಾನಪದ ಚಾರಿತ್ರಿಕ ಕಥನ ಗೀತೆಗಳು ಎಂದು ಖ್ಯಾತವಾಗಿರುವ ಲಾವಣಿಗಳು ಇಂದಿಗೂ ಪ್ರಸ್ತುತವಾಗಿರುವುದು ವಿಶೇಷವಾಗಿದೆ. ಜಾನಪದ ಚಾರಿತ್ರಿಕ ಕಥನಗೀತೆಗಳೆಂದು ಪ್ರಸಿದ್ಧವಾಗಿರುವ ಈ ಲಾವಣಿಗಳಲ್ಲಿ ಸಮಕಾಲೀನ ವಸ್ತು–ವಿಷಯಗಳನ್ನು ಒಳಗೊಂಡ ಮಾಹಿತಿಯ ಕಣಜವೇ ತುಂಬಿರುವುದು ಗಮನಾರ್ಹ. ಸ್ವಾತಂತ್ರ್ಯಪೂರ್ವದಲ್ಲಂತೂ ಗ್ರಾಮೀಣ ಯುವಜನರಲ್ಲಿ ರಾಷ್ಟ್ರೀಯಪ್ರಜ್ಞೆ, ಸಾಮಾಜಿಕ ಮೌಲ್ಯಗಳನ್ನು ತಿಳಿಸುವ ನಿಟ್ಟಿನಲ್ಲಿ ಅನೇಕ ಲಾವಣಿಕಾರರು ಲಾವಣಿಗಳನ್ನು ರಚಿಸಿದ್ದಾರೆ. ದೇಶಕ್ಕಾಗಿ, ನಾಡು–ನುಡಿಗಾಗಿ ದುಡಿದ ಪ್ರಾತಃಸ್ಮರಣೀಯ ರಾಷ್ಟ್ರನಾಯಕರನ್ನು, ಹೋರಾಟದಲ್ಲಿ ಭಾಗಿಯಾದ ಜನಸಾಮಾನ್ಯ ನಾಯಕರನ್ನು ಕುರಿತು ಅತಿರಂಜಿತವಾಗಿ ಲಾವಣಿಗಳನ್ನು ರಚಿಸಿ, ಜನರಿಗೆ ಅವರ ಸೇವಾಕಾರ್ಯಗಳನ್ನು ಮುಟ್ಟಿಸುವ ಕಾರ್ಯವನ್ನು ಮಾಡಿದರು. ೧೯೩೦–೪೦ರ ದಶಕದಲ್ಲಿ ಜರುಗಿದ ಎಲ್ಲ



ರಾಷ್ಟ್ರೀಯ ಘಟನೆಗಳಿಗೆ ನಮ್ಮ ಲಾವಣಿಕಾರರು ಕಿವಿಯಾದರು. ಆ ಘಟನೆಗಳನ್ನು ರಸವತ್ತಾಗಿ ಲಾವಣಿ ರೂಪದಲ್ಲಿ ದಾಖಲಿಸಿದರು. ಪ್ರಸಾರ ಮಾಧ್ಯಮಗಳು ಇಲ್ಲದ ಆ ಕಾಲದಲ್ಲಿ ಈ ಲಾವಣಿಗಳು ಒಂದು ರೀತಿಯಲ್ಲಿ ಪ್ರಸಾರ ಮಾಧ್ಯಮಗಳ ಕಾರ್ಯವನ್ನು ನಿರ್ವಹಿಸಿದವು ಎಂದರೆ ಅತಿಶಯೋಕ್ತಿಯಾಗಲಾರದು.

ಖಂಡಕಾವ್ಯ, ಕಾವ್ಯಕಥೆ, ಪದ್ಯಕಥೆ, ನೀಳ್ಗವಿತೆ, ಕಥಾಗೀತೆ, ಜನಪದ ಕಥನಕಾವ್ಯ ಎಂದೆಲ್ಲಾ ಕರೆಯುವ ಲಾವಣಿ ಜನಪದರ ಹೃದಯದ ಕಾವ್ಯವಾಗಿ ಹೊರಹೊಮ್ಮಿದೆ. ಹುಲಕುಂದದ ಭೀಮಕವಿ, ಶಿವಲಿಂಗಕವಿ ಮೊದಲಾದವರು ತಮ್ಮ ಸುತ್ತಮುತ್ತ ನಡೆದ ಘಟನೆಗಳನ್ನು ಲಾವಣಿ ರೂಪದಲ್ಲಿ ರಚಿಸಿ, ಹಾಡಿ ಜನಸಾಮಾನ್ಯರಿಗೂ ಈ ಲೋಕದಲ್ಲಿ ಏನೆಲ್ಲ ಘಟನೆಗಳು ನಡೆಯುತ್ತಿವೆ ಎಂಬುದರ ಅರಿವು ಮೂಡಿಸುವ ಕಾರ್ಯವನ್ನು ಮಾಡಿದರು. ಈ ಹಿನ್ನೆಲೆಯಲ್ಲಿ ೧೯೩೯ರಲ್ಲಿ ರಾಮದುರ್ಗ ಸಂಸ್ಥಾನದಲ್ಲಿ ಜರುಗಿದ ಒಂದು ದುರಂತವನ್ನು ಕುರಿತು ಈ ಲಾವಣಿಕಾರರು ಎರಡು ಅದ್ಭುತವಾದ ಲಾವಣಿಗಳನ್ನು ರಚಿಸಿದ್ದಾರೆ. ಅವುಗಳ ಸಮಗ್ರ ಅವಲೋಕನವನ್ನು ಪ್ರಸ್ತುತ ಲೇಖನದಲ್ಲಿ ಮಾಡುವ ಪ್ರಯತ್ನ ಮಾಡಿದ್ದೇನೆ.

ಬಿ. ಎಸ್. ತಲ್ವಾಡಿ ಅವರು ಸಂಪಾದಿಸಿದ 'ಜನಪದ ಚಾರಿತ್ರಿಕ ಕಥನಗೀತೆಗಳು' ಎಂಬ ಸಂಪುಟದಲ್ಲಿ ರಾಮದುರ್ಗ ದುರಂತದ ಎರಡು ಲಾವಣಿಗಳನ್ನು ಪ್ರಕಟಿಸಲಾಗಿದೆ. ಈ ಲಾವಣಿಗಳಲ್ಲಿ ರಾಮದುರ್ಗ ಸಂಸ್ಥಾನದಲ್ಲಿ ನಡೆದ ದುರಂತಗಳ ವೈವಿಧ್ಯಮಯ ಚಿತ್ರಣ ನಮಗೆ ದೊರೆಯುತ್ತದೆ.

ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯಾಂದೋಲನದಲ್ಲಿ ಇಡೀ ಭಾರತವು ತನ್ನನ್ನು ತಾನು ಸಮರ್ಪಿಸಿಕೊಂಡಿತ್ತು. ದೇಶದ ಪ್ರತಿ ಮನೆಯು ಸ್ವಾತಂತ್ರ್ಯದ ತಹತಹಿಕೆಯಿಂದ ಮಿಡಿಯುತ್ತಿತ್ತು. ಪ್ರತಿ ಮನೆಯಿಂದ ಕನಿಷ್ಠ ಒಬ್ಬನಾದರೂ ಈ ಸ್ವಾತಂತ್ರ್ಯ ಆಂದೋಲನದಲ್ಲಿ ತನ್ನನ್ನು ತಾನು ಸಮರ್ಪಿಸಿಕೊಂಡಿದ್ದ. 'ವಂದೇ ಮಾತರಂ' ಮತ್ತು 'ಭಾರತ ಛೋಡೋ' ಈ ಘೋಷಣೆಯಿಂದ ಇಡೀ ಭಾರತವು ದುಮುದುಮಿಸುತ್ತಿತ್ತು. ಸತ್ಯಾಗ್ರಹಿಗಳ ಮೇಲೆ ಲಾಠಿ ಚಾರ್ಜ, ಗೋಳಿಬಾರ್‌ಗಳು ನಿತ್ಯದ ಮಾತಾಗಿದ್ದವು. ಅನೇಕ ಜನ ಸತ್ಯಾಗ್ರಹಿಗಳು ಹುತಾತ್ಮರಾದರೆ, ಬಹಳಷ್ಟು

ಜನ ಪೊಲೀಸ್ ಅತ್ಯಾಚಾರಗಳಿಂದ ಆಜನ್ಮ ಅಂಗವಿಕಲರಾಗಿದ್ದರು. ಎಲ್ಲೆಲ್ಲೂ ಸತ್ಯಾಗ್ರಹ, ಮಹಾತ್ಮಾ ಗಾಂಧೀಜಿ, ಸ್ವಾತಂತ್ರ್ಯ ಈ ಶಬ್ದಗಳೇ ಕೇಳಿ ಬರುತ್ತಿದ್ದವು.

ಆದರೆ ರಾಮದುರ್ಗ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಎಂಬ ಶಬ್ದದ ಬಗ್ಗೆ ಚರ್ಚಿಸುವುದೂ ಅಪರಾಧವಾಗಿತ್ತು. ಸಂಸ್ಥಾನದ ಅಧಿಪತಿಯಾಗಿದ್ದ ಸಂಗ್ರಾಮಸಿಂಹ ಸ್ವಾತಂತ್ರ್ಯ ಆಂದೋಲನದ ವಿರೋಧಿಯಾಗಿದ್ದ. ಆತ ಬ್ರಿಟಿಷ್ ಸರ್ಕಾರದ ರಾಜಪ್ರತಿನಿಧಿಯಾಗಿದ್ದರೂ ಸ್ವತಂತ್ರ ರಾಜನಷ್ಟೇ ಶಕ್ತಿಶಾಲಿಯಾಗಿದ್ದ. ಸ್ವಾತಂತ್ರ್ಯ ಆಂದೋಲನಕ್ಕೆ ತನ್ನ ಸಂಸ್ಥಾನದಲ್ಲಿ ಅವಕಾಶ ಮಾಡಿಕೊಟ್ಟರೆ ಬ್ರಿಟಿಷ್ ಸರ್ಕಾರದ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆಂದು ಆತ ಹೆದರಿದ್ದ. ಸ್ವಾತಂತ್ರ್ಯ ಆಂದೋಲನದ ಸಭೆಗಳು ನಡೆಯುವುದು ಅಥವಾ ಸಾಹಿತ್ಯ ಪ್ರಚಾರ ಮಾಡುವುದನ್ನು ತನ್ನ ಸಂಸ್ಥಾನದಲ್ಲಿ ಆತ ನಿಷೇಧಿಸಿದ್ದ. ಯಾರಾದರೂ ಸ್ವಾತಂತ್ರ್ಯದ ಬಗ್ಗೆ ಮಾತನಾಡಿದರೆ ಅವರ ನಾಲಿಗೆಯನ್ನು ಸಾರ್ವಜನಿಕವಾಗಿ ಸೀಳಬೇಕೆಂದು ಹಂಬೀರ್‌ನಿಗೆ ಆಜ್ಞಾಪಿಸಿದ್ದ. ಹಂಬೀರ್ ಮೊದಲೇ ಕ್ರೂರಿ. ಈಗ ಸ್ವತಃ ರಾಜನೇ ಈ ರೀತಿ ಹೇಳುತ್ತಾನೆಂದ ಮೇಲೆ ಮತ್ತಷ್ಟು ಕ್ರೂರಿಯಾದ. ತನ್ನ ವಿರೋಧಿಗಳನ್ನು ಸ್ವಾತಂತ್ರ್ಯದ ಹೆಸರಿನಲ್ಲಿ ಬಂಧಿಸಿ ಅವರಿಗೆ ತರತರದ ಚಿತ್ರಹಿಂಸೆ ನೀಡಲಾರಂಭಿಸಿದ. ರಾಮದುರ್ಗ ಸಂಸ್ಥಾನ ಒಂದು ರೀತಿಯಲ್ಲಿ ನರಕ ಸಂಸ್ಥಾನವಾದಂತಾಯಿತು.

ಸಂಸ್ಥಾನದ ಈ ಕಡೆ ಕೊಲ್ಲಾಪುರ ಸಂಸ್ಥಾನವಿದ್ದರೆ ಆಕಡೆ ಮಿರಜ್, ಮಗದೊಂದು ಕಡೆ ಕುರಂದವಾಡ ಸಂಸ್ಥಾನ ಹಾಗೂ ಅದಕ್ಕೆ ಅಂಟಿಕೊಂಡು ಸಾಂಗ್ಲಿ ಸಂಸ್ಥಾನಗಳಿದ್ದವು. ಈ ಎಲ್ಲ ಸಂಸ್ಥಾನಗಳೂ ಬ್ರಿಟಿಷರ ಆಧಿಪತ್ಯದಲ್ಲಿಯೇ ಕೆಲಸ ಮಾಡುತ್ತಿದ್ದವು. ಸೀಮೆಯ ಆ ಕಡೆ ಪುಣೆ, ಸಾತಾರಾ, ಮುಂಬೈ ಪ್ರಾಂತ್ಯಗಳಿದ್ದವು. ಅಲ್ಲಿಯೂ ಬ್ರಿಟಿಷರ ಆಡಳಿತವಿದ್ದರೂ ಅಲ್ಲಿಯ ಜನ ಬ್ರಿಟಿಷರ ವಿರುದ್ಧ ದಂಗೆ ಎದ್ದಿದ್ದರು. ಅಲ್ಲಿಯ ಪ್ರತಿಯೊಂದು ಮನೆಗಳಲ್ಲಿ ಸ್ವಾತಂತ್ರ್ಯಯೋಧರು ಹುಟ್ಟಿಕೊಂಡು ಬ್ರಿಟಿಷರಿಗೆ ತಲೆನೋವಾಗಿದ್ದರು. ಜಲಿಯನ್ ವಾಲಾಬಾಗದ ಹತ್ಯಾಕಾಂಡದಿಂದ ಯುವಕರು ಕ್ರುದ್ಧರಾಗಿದ್ದರು. ಭಗತಸಿಂಗ, ರಾಜಗುರು ಅವರ ಗಲ್ಲಿನಿಂದಾಗಿ ಯುವಕರ ರಕ್ತ ಕುದಿಯುತ್ತಲಿತ್ತು. ಅನೇಕ ಯುವಕರು ಕೈಗೆ ಶಸ್ತ್ರವನ್ನು ಹಿಡಿದರು. ಕೆಲವರು ಗಾಂಧೀಜಿ ಸುಭಾಷಚಂದ್ರ



ಭೋಸರ ಪರಸ್ಪರ ವಿರೋಧ ತಾತ್ವಿಕ ಭಿನ್ನಾಭಿಪ್ರಾಯಗಳಿಂದ ಗೊಂದಲಗೊಂಡಿದ್ದರು. ಹಲವು ಯುವಕರು ಭೂಗತರಾಗಿ ಬ್ರಿಟಿಷರಿಗೆ ಚಳ್ಳೆಹಣ್ಣು ತಿನ್ನಿಸಿ ಕ್ಷಣಾರ್ಧದಲ್ಲಿ ಮಾಯವಾಗಿ ಬಿಡುತ್ತಿದ್ದರು. ಇಂತಹ ಯುವಕರು ಆಶ್ರಯಕ್ಕಾಗಿ ಬೇರೆ ಸಂಸ್ಥಾನಗಳಿಗೆ ಫರಾರಿಯಾಗುತ್ತಿದ್ದರು. ಸಮಯ ನೋಡಿ ಮತ್ತೆ ತಮ್ಮ ಸ್ವಸ್ಥಾನಕ್ಕೆ ಹೋಗಿ ಅಲ್ಲಿ ಗಲಾಟೆಯನ್ನು ಎಬ್ಬಿಸುತ್ತಿದ್ದರು. ಅವರ ಇರುವಿಕೆಯನ್ನು ಪತ್ತೆ ಮಾಡದೆ ಪೊಲೀಸರು ಕಂಗಾಲಾಗುತ್ತಿದ್ದರು.

'ನಿಮ್ಮ ನಿಮ್ಮ ಸಂಸ್ಥಾನಗಳಲ್ಲಿಯ ಸರ್ಕಾರಿ ವಿರೋಧಿ ಕಾರ್ಯ ಚಟುವಟಿಕೆಗಳನ್ನು ನಿರ್ದಯವಾಗಿ ಹತ್ತಿಕ್ಕಿರಿ. ಬೇರೆ ಸಂಸ್ಥಾನಗಳಿಂದ ಆಶ್ರಯಕ್ಕಾಗಿ ಓಡಿ ಬರುವ ಕ್ರಾಂತಿಕಾರಿಗಳಿಗೆ ಆಶ್ರಯ ಕೊಡುವ ಅಥವಾ ಕೊಡುತ್ತಿರುವ ನಾಗರಿಕರನ್ನು ಬಂಧಿಸಿ ಅವರನ್ನು ಸೆರೆಮನೆಗೆ ತಳ್ಳಿರಿ; ಅವರ ಆಸ್ತಿಪಾಸ್ತಿಯನ್ನು ಜಪ್ತ ಮಾಡಿರಿ' ಎಂದು ಕಲೆಕ್ಟರ್ ಎಲ್ಲ ಸಂಸ್ಥಾನಿಕರಿಗೆ ಕಟ್ಟಪ್ಪಣೆ ಮಾಡಿದ್ದ. ಬೇರೆ ಸಂಸ್ಥಾನಗಳಲ್ಲಿ ನಡೆಯುತ್ತಿರುವಂತಹ ಇಂಗ್ಲಿಷ್ ವಿರೋಧಿ ಚಟುವಟಿಕೆಗಳು ರಾಮದುರ್ಗ ಸಂಸ್ಥಾನದಲ್ಲಿ ನಡೆಯುತ್ತಿಲ್ಲವೆಂದು ಮುರಾರಿರಾವ್ ಭಾವೆ ತುಂಬ ನಿರಾಳನಾಗಿದ್ದ. ಆದರೆ ಸ್ವಾತಂತ್ರ್ಯದ ಹೆಸರಿನಲ್ಲಿ ಜನರನ್ನು ಪೀಡಿಸಲಾರಂಭಿಸಿದ. ಯಾರಾದರೂ ಹೆಂಗಸು ಕಣ್ಣಿಗೆ ಬಿದ್ದರೆ ಅವಳನ್ನು ಎತ್ತಿಕೊಂಡು ತೋಟದ ಮನೆಗೆ ಹೋಗಿ ಅವಳನ್ನು ಬಲಾತ್ಕರಿಸುತ್ತಿದ್ದ. ಆಕೆ ವಿರೋಧಿಸಿದರೆ ದೇಶದ್ರೋಹದ ಕೆಲಸದಲ್ಲಿ ತೊಡಗಿರುವೆಯೆಂದು ಆಕೆಯನ್ನು, ಆಕೆಯ ಮನೆಯ ಜನರನ್ನು ಬಂಧಿಸಿ ಜೈಲಿಗೆ ತಳ್ಳುತ್ತಿದ್ದ. ಸಂಸ್ಥಾನದ ತುಂಬ ಭಯದ ಗಂಭೀರ ವಾತಾವರಣವು ಪಸರಿಸಿದ್ದಿತು.

೧೯೩೯ರಲ್ಲಿ ರಾಮದುರ್ಗ ಸಂಸ್ಥಾನಿಕರು ಜನರ ಮೇಲೆ ವಿಪರೀತವಾದ ತೆರಿಗೆ ಭಾರವನ್ನು ಹಾಕಿದ್ದರು. ಆಗ ಜನಸಮುದಾಯ ಸಂಸ್ಥಾನದ ವಿರುದ್ಧ ಬಂಡೆದ್ದಿತು. ಈ ಘಟನೆಯನ್ನು ಲಾವಣಿಕಾರರು ತಮ್ಮ ಲಾವಣಿಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ.

**ರಾಮದುರ್ಗ ಸಂಸ್ಥಾನ ಮೂವತ್ತ ಮೂರು**
**ಹಳ್ಳಿಯವರು ಸಣ್ಣ ದೊಡ್ಡವರ**
**ಶಾಂತಿಯಿಂದ ಚಳವಳಿ ನಡಸಿದ್ರು ಜೋರ**

**ಕ್ರಾಂತಿ ಕಾಲ ಬಂತು ತಿಳಿಯಲಿಲ್ಲ ಹುನ್ನಾರ**
**ಪಂಚಪಿತರ ಗೂಳಿ ಕೂಡಿ ಹೊಂಚ ಹಾಕಿ**
**ಒಳಗಿಂದೊಳಗ ಸಂಚ ಮಾಡಿ ಕೆಡಿಸಿದರು ವಂಚಕರ**
**ಆತ್ಮಘಾತಕರ**

ಪ್ರಜಾಸಂಘ ಎಂಬ ಪಕ್ಷವನ್ನು ಹುಟ್ಟು ಹಾಕಿ ತೆರಿಗೆ ಮುಕ್ತತೆಗಾಗಿ ಕೆಲವು ಹೋರಾಟಗಾರರು ಚಳುವಳಿ ಪ್ರಾರಂಭಿಸಿದರು. ಅದಕ್ಕೆ ಪ್ರತಿಕ್ರಿಯೆ ಎಂಬಂತೆ ರಾಮದುರ್ಗ ಸಂಸ್ಥಾನಿಕರು ಎಲ್ಲ ಕಡೆ ಪೊಲೀಸ್ ಬಂದೋಬಸ್ತ ಮಾಡಿದರು. ಕಾಂಗ್ರೆಸ್ ಪಕ್ಷ ಮತ್ತು ಸಂಸ್ಥಾನಿಕರ ನಡುವೆ ಮಾತುಕತೆ ನಡೆಯಿತು. ಆದರೆ ಗಂಗಾಧರರಾವ ದೇಶಪಾಂಡೆ ಅಂತಹ ಕೆಲವರು ಇತ್ತ ಗಾಂಧೀಜಿಯವರಿಗೆ ಒಂದು ಹೇಳುವುದು, ಅತ್ತ ಸಂಸ್ಥಾನಿಕರಿಗೂ ಒಂದು ಹೇಳಿ ಇಬ್ಬರ ನಡುವೆ ಮತ್ತಷ್ಟು ವೈಮನಸ್ಸು ತರುವ ಕೆಲಸವನ್ನು ಮಾಡಿದರು. ಈ ವಿಷಯ ಕುರಿತು ಷಣ್ಮುಖಪ್ಪ ಅಂಗಡಿ ಅವರು ತಮ್ಮ ಆತ್ಮಕಥೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ್ದಾರೆ.

ಪೊಲೀಸರು ನಿರಾಯುಧರಾದ ಜನರ ಮೇಲೆ ದಾಳಿ ಮಾಡಿದರು. ಅದರಲ್ಲಿ ಕೆಲವರು ಸತ್ತರು. ಇದರಿಂದ ಸಿಟ್ಟಿಗೆದ್ದ ಜನರು ಪೊಲೀಸರ ಮೇಲೆ ಪ್ರತೀಕಾರ ತೀರಿಸಿಕೊಂಡರು. ಆಗ ಕೆಲವು ಪೊಲೀಸರು ತೀರಿಕೊಂಡರು. ಇದರಿಂದ ಸಿಟ್ಟಿಗೆದ್ದ ಸಂಸ್ಥಾನಿಕರು ಆರು ಜನರಿಗೆ ಗಲ್ಲು ಶಿಕ್ಷೆ ವಿಧಿಸಿದರು. ಈ ಘಟನೆಯನ್ನು ಲಾವಣಿಕಾರ ಹೀಗೆ ಹೇಳುತ್ತಾನೆ–

**ಸಾಹಾ ತಾರೀಖು ಯಕ್ಕೋಣೀಸೆ ಬೇಚಾಳೀಸ**
**ಸೋಮವಾರ ದಿನ ಸೂರ್ಯ ಉದಯಕ್ಕ**
**ಏರಿದರು ಆರು ಮಂದಿ ಆ ಕಾಲಕ್ಕ**
**ಜೀವದಾನ ನೀಡದಾರ ದೇಶ ಉದ್ಧಾರಕ**
**ಗ್ರಹ ಹಿಡಿದಂಗಾತು ದುಃಖ ಕರ್ನಾಟಕಕ**
**ಪಕ್ಕ ಮುರಿದು ಪಕ್ಷಿ ಬಿದ್ದಾಂಗಾತ ನೆಲಕ**
**ಮರ್ತೆಲೋಕ ಬಿಟ್ಟು ಹ್ವಾದ್ರೋ ಸತ್ಯ ಲೋಕಕ್ಕ ದುರಂತ ಆದದ್ದಕ್ಕ**



ಆರು ಜನರಿಗೆ ಶಿಕ್ಷೆಯಾದ ಈ ಹೃದಯ ವಿದ್ರಾವಕ ಘಟನೆಯನ್ನು ಲಾವಣಿಕಾರ ಹುಲಕುಂದ ಶಿವಲಿಂಗ ಕವಿಗಳ ಪರಮಾಪ್ತ ಶಿಷ್ಯ ದುಂಡಪ್ಪ ವಿವರಿಸಿದ್ದಾನೆ. ಈ ಲಾವಣಿಯ ವೈಶಿಷ್ಟ್ಯವೆಂದರೆ ಮರಾಠಿ ಪದಗಳನ್ನು ಕವಿ ಲೀಲಾಜಾಲವಾಗಿ ಬಳಸುತ್ತಾನೆ. ಸಾಹಾ, ತಾರೀಖು, ಯಕ್ಕೋಣೀಸೆ, ಬೇಚಾಳೀಸ ಎಂಬ ಪದಗಳನ್ನು ಕವಿ ತನ್ನ ಲಯಕ್ಕೆ ತಕ್ಕಂತೆ ಬಳಸಿದ್ದಾನೆ. ಇನ್ನೂ ವಿಶೇಷವೆಂದರೆ, ಈ ಲಾವಣಿಯು ಸ್ವಾತಂತ್ರ್ಯಪೂರ್ವದಲ್ಲಿ ರಚನೆಯಾಗಿದೆ. ಹೀಗಿದ್ದೂ ಈ ಲಾವಣಿಯಲ್ಲಿ 'ಕರ್ನಾಟಕ' ಎಂಬ ಪದವನ್ನು ಕವಿ ಬಳಸಿದ್ದಾನೆ. ಹಾಗೆ ನೋಡಿದರೆ ಸ್ವಾತಂತ್ರ್ಯಾನಂತರ ೧೯೭೩ರ ಸುಮಾರಿಗೆ 'ಕರ್ನಾಟಕ' ಎಂಬ ಹೆಸರು ನಮ್ಮ ರಾಜ್ಯಕ್ಕೆ ಅಧಿಕೃತವಾಗಿ ಬಂದಿದ್ದರೂ ಕವಿ ಆಗಲೇ ಈ ನಾಡನ್ನು ಕರ್ನಾಟಕ ಎಂದು ಅಭಿಮಾನದಿಂದ ಹೇಳಿದ್ದು ಗಮನಾರ್ಹ ಸಂಗತಿಯೆನಿಸಿದೆ.

ಇದೇ ಮಾದರಿಯ ಇನ್ನೊಂದು ರಾಮದುರ್ಗ ದುರಂತ ಎಂಬ ಲಾವಣಿ ಜನಪದ ಚಾರಿತ್ರಿಕ ಕಥನಗೀತೆಗಳು ಸಂಪುಟದಲ್ಲಿ ಸೇರಿದೆ.

**ರಾಜೇಸಾಹೇಬನ ಬಗಿ ಬಂತೋ**
**ಬಹಳ ಒಳೇ ಶ್ರೇಷ್ಠಾ**
**ಅಡ್ಡಬಿದ್ದು ರೈತರು**
**ತರಬ್ಯಾರೋ ಮುಕ್ಕಟ್ಟಾ**
**ರಾಜೇಸಾಹೇಬಗ ಮಾಡಂತಾರೋ ಹಪ್ತೆ ಸೂಟಾ**
**ಸರಕಾರಕ ಕರುಣ ಬರಲಿಲ್ಲ ಏಟೇಟಾ**
**ಶ್ರೀಮಂತ ರಾಜೇಸಾಹೇಬಗ ರೈತರ ಕಾಟಾ**

ರಾಜೇಸಾಹೇಬನ ಶೋಷಣೆಯನ್ನು ಕವಿ ಇಲ್ಲಿ ರಸವತ್ತಾಗಿ ವಿವರಿಸಿದ್ದಾನೆ. ಈತನ ವಿರುದ್ಧ ಮುನವಳ್ಳಿ ವಕೀಲರು ಮಾಡಿದ ಸುದೀರ್ಘ ಹೋರಾಟವನ್ನು ಕವಿ ರಮ್ಯವಾಗಿ ಚಿತ್ರಿಸಿದ್ದಾನೆ. ಕೊನೆಗೆ ಮುನವಳ್ಳಿ ವಕೀಲರು ಗೆದ್ದು, ಸಂಸ್ಥಾನಿಕ ಸೋಲನ್ನು ಒಪ್ಪಿಕೊಳ್ಳುತ್ತಾನೆ. ಈ ಘಟನೆಯನ್ನು ಲಾವಣಿಕಾರ ಹೀಗೆ ವರ್ಣಿಸುತ್ತಾನೆ.

**ಮುನವಳ್ಳಿ ವಕೀಲಗ ಒಪ್ಪಿಸಿ ಬಿಟ್ಟಾ**
**ದಿಲ್ಲಿ ಅಡ್ಡಾಡಿ ಮಾಡ್ಯಾನೋ ಬಾಳ ಕಟಪಟಾ**
**ಬಿಡಿಸ್ಯಾನೋ ವಕೀಲನ ಬಾಳ ಶ್ರೇಷ್ಠಾ**
**ಮುನವಳ್ಳಿ ವಕೀಲ ಬಾಳ ಅಡಮುಟ್ಟಾ**
**ಸಾಹಸ ಮಾಡಿ ಸರಕಾರನ್ನ ಬಿಡಿಸ್ಯಾನೋ ಮೆಟ್ಟಾ**
**ಏಕೀಕರಣ ಎಂಬುದರಲ್ಲಿ ರಾಜ್ಯಗ ಆದೀತೋ ಕಷ್ಟ**
**ರಾಜೇಸಾಹೇಬ ಹ್ವಾದನೋ ರಾಮದುರ್ಗ ಬಿಟ್ಟಾ**
**ಪುಣೆ ಮುಂಬಯಿ ತಿರಗತಾನ ಹರಕ ಅಂಗಿ ತೊಟ್ಟಾ**

ರಾಜೇಸಾಹೇಬನಿಗೆ ಆದ ಗತಿಯನ್ನು ಕವಿ ಇಲ್ಲಿ ವಾಸ್ತವ ನೆಲೆಗಟ್ಟಿನ ಮೇಲೆ ಚಿತ್ರಿಸಿದ್ದಾನೆ. ಮುನವಳ್ಳಿ ವಕೀಲರ ಪ್ರಯತ್ನವನ್ನು ಇತಿಹಾಸದಲ್ಲಿ ತುಂಬ ಅಚ್ಚುಕಟ್ಟಾಗಿ ಕವಿ ದಾಖಲಿಸುವ ಪ್ರಯತ್ನ ಮಾಡಿದ್ದಾನೆ.

ಸಮಕಾಲೀನ ವಸ್ತು ವಿಷಯಗಳನ್ನು ಆಧರಿಸಿಕೊಂಡು ಲಾವಣಿಕಾರರು ಇಂಥ ಅಪರೂಪದ ಲಾವಣಿಗಳನ್ನು ರಚಿಸುತ್ತಿದ್ದರು. ಅವುಗಳನ್ನು ಜನರ ಮುಂದೆ ಹಾಡಿ, ಇಂಥ ಘಟನೆಗಳು ಜನರ ಮನಸ್ಸಿನಿಂದ ಮಾಯವಾಗದಂತೆ ನೋಡಿಕೊಳ್ಳುತ್ತಿದ್ದರು. ರಾಮದುರ್ಗ ದುರಂತ ನಡೆದು ಎಂಟು ದಶಕಗಳೇ ಕಳೆದು ಹೋಗಿದ್ದರೂ, ಈ ಲಾವಣಿಗಳ ಮೂಲಕ ಈ ದುರಂತದ ನೆನಪು ಇನ್ನೂ ಉಳಿದಿರುವುದು ವಿಶೇಷ.

## ಶಿವಲಿಂಗ ಕವಿ

ಕ್ರಿ.ಶ. ಸು. ೧೯೦೦ ರಲ್ಲಿ ರಾಮಲಿಂಗೇಶ್ವರನ ಕೃಪೆಯಿಂದ ರಾಚಯ್ಯ ಮತ್ತು ವೀರಮ್ಮ ದಂಪತಿಗಳಿಗೆ ರುದ್ರಯ್ಯ ಮಗುವಾಗಿ ಹುಟ್ಟುತ್ತಾನೆ. ಚಿಕ್ಕಂದಿನಿಂದಲೂ ನಿಸರ್ಗ ಸೌಂದರ್ಯಕ್ಕೆ ಮಾರುಹೋದ ರುದ್ರಯ್ಯನು ವಯಸ್ಸಾದಂತೆ ಲೋಕಾನುಭಾವಿಯಾಗಿ ಸಹಜ ಕವಿಯಾಗುತ್ತಾನೆ. ಕಲಿತದ್ದು ಕೇವಲ ನಾಲ್ಕನೆಯ ಈಯತ್ತೆ. ಆದರೇನು?.... ಪ್ರತಿಭೆ ಉಕ್ಕಿ ಹರಿಯುತ್ತದೆ. ವರಕವಿಯೆನಿಸುತ್ತಾನೆ. ಕಲೆಯ ಸಂಪ್ರದಾಯವನ್ನು ಮೀರಿ, ಲೋಕಬಾಹಿರನಾಗಿ, ತನ್ನನ್ನು ಸುತ್ತುವರಿದ ಜನತೆಗೆ ನಿಧಿಯಾಗಿ, ಕವಿಯಾಗಿ, ರಸಿಕನಾಗಿ, ವೈದ್ಯನಾಗಿ



ಕಂಗೊಳಿಸುತ್ತಾನೆ. 'ಶಿವಲಿಂಗ' ಎನ್ನುವ ಅಂಕಿತದಲ್ಲಿ ನೂರಾರು ಲಾವಣಿ, ಗೀಗೀ, ಡೊಳ್ಳಿನಹಾಡು ರಚಿಸಿ 'ಶಿವಲಿಂಗ ಕವಿ' ಎಂದೇ ಕೀರ್ತಿಪಡೆದ. 'ಹುಲಕುಂದ ಹಿರೇಮಠ' ಎಂಬ ಅಂಕಿತವೂ ಕೆಲಹಾಡುಗಳಲ್ಲಿ ಬರುತ್ತದೆ. ಹಲವಾರು ಬೈಲಾಟಗಳನ್ನೂ ರಚಿಸಿದ್ದಾನೆ. ಅದರಲ್ಲಿ ವೇಷತೊಟ್ಟು ಕುಣಿದಾಡಿದ್ದಾನೆ. ಅಧ್ಯಾತ್ಮದಲ್ಲೂ ಅಷ್ಟೇ ನಿಷ್ಣಾತ. ಶ್ರೀಸಾಮಾನ್ಯರಿಗೂ ಅರ್ಥವಾಗುವಂತೆ ಅಧ್ಯಾತ್ಮದನುಭವವನ್ನು ತತ್ವಪದಗಳಲ್ಲಿ ಎರಕಹೊಯ್ಯುತ್ತಾನೆ. ಹುಲಕುಂದ ಹಿರೇಮಠದ ಪಟ್ಟಾಧಿಕಾರಿಯಾಗಿ, ಕವಿತ್ವಶಕ್ತಿಗೆ ಮಾರುಹೋಗಿ ಕಲಾಕಾರರನ್ನು ಗೌರವಿಸುತ್ತಿದ್ದನಂತೆ. ಗಂಡು–ಹೆಣ್ಣು ಎರಡೂ ಕಡೆಯ ಹಾಡುಗಳನ್ನು ಅಂದರೆ 'ಕಲ್ಗಿ–ತುರಾಯಿ' ಪದಗಳನ್ನು ರಚಿಸುವಲ್ಲಿ ಕೈ ಹಿಡಿಯುವವರು ಯಾರೂ ಇದ್ದಿರಲಿಲ್ಲವಂತೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಕವಿ ಸಲ್ಲಿಸಿದ ಸೇವೆ ಅಪ್ರತಿಮವಾದುದು. ಭಾರತೀಯರಲ್ಲಿ ರಾಷ್ಟ್ರಪ್ರೇಮ ಉಕ್ಕಿಬರುವಂತೆ ಹಾಡುರಚಿಸಿ ಮಹದುಪಕಾರ ಮಾಡಿದ್ದಾನೆ. ಆಯುರ್ವೇದಶಾಸ್ತ್ರದಲ್ಲೂ ಪಾರಂಗತನಾದ ಈತನ ವೈದ್ಯಕೀಯ ಸೇವೆ ಆ ನಾಡಜನತೆಗೆ ಉಚಿತವಾಗಿತ್ತು. ಮನದ, ಮೈಯ ರೋಗಗಳನ್ನೆಲ್ಲಾ ಸಲೀಲವಾಗಿ ಬಿಡಿಸುವ ಕಲಾಕೌಶಲ್ಯ ಇವನದು. ಆ ವಿಷಯ ಈ ವಿಷಯ ಯಾವುದೇ ವಿಷಯವಿರಲಿ ತತ್‌ಕ್ಷಣ ಹಾಡು ರಚಿಸಿಕೊಡುವ ಆಶುಕವಿತ್ವ ಶಕ್ತಿ ಇವನದಾಗಿತ್ತು. ಹೆಬ್ಬಾಳದ ಹನುಮಂತ ಮತ್ತು ಫಕೀರವ್ವ; ಮನಿಕಟ್ಟಿ ಗಂಗವ್ವ; ಬಾಡಗಿ ಗಂಗವ್ವ; ಹೊಸೂರ ಸೋಮಲಿಂಗ ಮೊದಲಾದವರು ಈಗಲೂ ಹಾಡುತ್ತಾರೆ. ಶಿವಲಿಂಗ ಕವಿಗಳ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ ಚಿಕ್ಕುಂಬಿಯ ಮೇಳವೂ ಪ್ರಸಿದ್ಧಿಪಡೆದಿತ್ತು.

ಶಿವಲಿಂಗ ಕವಿ ಅಷ್ಟೇ ಜಿದ್ದಿನವ. ಶಾಸ್ತ್ರಪಾರಂಗತ. ಏನೇ ಬರೆದರೂ ಅದಕ್ಕೆ ಆಧಾರವಿರುತ್ತಿತ್ತು. ಹರದೇಶಿ–ನಾಗೇಶಿ ಹಾಡುಗಳಲ್ಲಂತೂ ತತ್ವದ ಹೊನಲನ್ನೇ ಹರಿಸಿದ್ದಾನೆ. ಅಲ್ಲದೆ ರಾಷ್ಟ್ರನಾಯಕರ, ಧರ್ಮದುರಂಧರರ, ಸಾಮಾಜಿಕ, ರಾಜಕೀಯ ವಿಷಯಗಳ ಮೇಲೆ ಸಾವಿರಾರು ಹಾಡು ರಚಿಸಿದ್ದಾನೆ. ಮೊದಮೊದಲು ಹುಲಕುಂದದ ರಾಮಲಿಂಗೇಶ್ವರ ಗುಡಿಯಲ್ಲಿ ಕುಳಿತುಕೊಂಡು ಹಾಡು ರಚಿಸುತ್ತಿದ್ದುದನ್ನು ಅಲ್ಲಿಯ ಹಿರಿಯರು ಈಗಲೂ ನೆನೆಸಿಕೊಳ್ಳುತ್ತಾರೆ.

ಕೆಲಕಾಲದ ನಂತರ ಹುಲಕುಂದ ಬಿಟ್ಟು ಚಿಕ್ಕುಂಬಿಯಲ್ಲಿ ನೆಲೆಸಿದ್ದನೆಂದೂ ತಿಳಿದುಬರುತ್ತದೆ. ಅಲ್ಲಿಯೂ ಒಂದು ಮಠ ಇದೆ. ದಿ ೧೦–೮–೧೯೫೫ರಲ್ಲಿ ತೀರಿಕೊಂಡನು.

ಶಿವಲಿಂಗ ಕವಿ ಭಾರತದ ಸ್ವಾತಂತ್ರ್ಯ ಸಂಗ್ರಾಮ ತೀವ್ರ ಸ್ವರೂಪ ಪಡೆದಾಗ ಈ ದೇಶದ ಬಗೆಗೆ ಸ್ವಾಭಿಮಾನವನ್ನು ಮೂಡಿಸುವ ಅನೇಕ ಲಾವಣಿಗಳನ್ನು ಬರೆದು ಸ್ವತಃ ಮೇಳಕಟ್ಟಿ ನೂರಾರು ಸ್ಥಳಗಳಲ್ಲಿ ಸಂಚರಿಸಿದನು. ಇಪ್ಪತ್ತೈದಕ್ಕಿಂತ ಹೆಚ್ಚು ಗೀಗೀ ಮೇಳಗಳ ನಿರ್ಮಾಣಕ್ಕೆ ಕಾರಣನಾದನು. ಮಹಾತ್ಮಾ ಗಾಂಧೀಜಿಯವರ ತತ್ವ ಸಿದ್ಧಾಂತಗಳ ಕುರಿತು ಜನತೆಯಲ್ಲಿ ಅರಿವು ಮೂಡಿಸುವ ಕಾರ್ಯ ಮಾಡಿದನು. ಗಾಂಧೀಜಿಯವರನ್ನು ಕುರಿತು–

**ತಾಯಿ ಭಾರತಮ್ಮನ ಸುಪುತ್ರ**
**ನಮ್ಮ ಮಹಾತ್ಮ ಗಾಂಧೀಜಿ**
**ಹುಟ್ಟಿ ಬಂದಾನ ಕೃಷ್ಣನ್ಹಾಂಗ**
**ಬಂಧನವ ಬಿಡಿಸುವ ರಾಘವನ್ಹಂಗ**

ಇಂಥ ಅನೇಕ ಹಾಡುಗಳನ್ನು ಶಿವಲಿಂಗ ಕವಿ ರಚಿಸಿದ್ದಾನೆ. ಶಿವಲಿಂಗ ಕವಿಯನ್ನು ಹಿಡಿದು ಜೈಲಿಗೆ ಹಾಕಬೇಕೆಂದು ಬ್ರಿಟೀಶ ಪೊಲೀಸರು ಬಹಳ ಹುಡುಕಿದರು. ಆದರೆ ಕವಿಯನ್ನು ಹಿಡಿಯಲಾಗಲಿಲ್ಲ. ಇವನೇ ಶಿವಲಿಂಗ ಕವಿ ಎಂದು ಊರ ಜನರು ಪೊಲೀಸರಿಗೆ ಹೇಳಲಿಲ್ಲ. ತಮ್ಮೂರಿನ ಒಬ್ಬ ಪ್ರತಿಭಾವಂತ ರಾಷ್ಟ್ರಭಕ್ತ ಕವಿ ಜೈಲು ಸೇರಬಾರದೆಂಬುದೇ ಜನರ ಅಪೇಕ್ಷೆಯಾಗಿತ್ತು.

ಗಾಂಧೀಜಿಯವರು ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಮೂಲಕ 'ಭಾರತ ಬಿಟ್ಟು ತೊಲಗಿ' ಆಂದೋಲನ ಆರಂಭಿಸಿದಾಗ, ಶಿವಲಿಂಗ ಕವಿ ಗಾಂಧೀಜಿಯವರ ಆಶಯದ ವಿಚಾರಗಳನ್ನು ಬಳಸಿಕೊಂಡು ಅನೇಕ ಲಾವಣಿಗಳನ್ನು ರಚಿಸಿದ. ಅಂಥ ಒಂದು ಲಾವಣಿ ಹೀಗಿದೆ–

**ಮಂಗ ಪಿರ್ಯಾಂಗರನ**
**ಇಂಗ ತಿನಸತೀವ**
**ಇಲ್ಲಿದ್ದ ಮಾಡವರೇನಾ**



**ತಿಂದ ತೇಗಿದಾರ ನಮ್ಮನ್ನಾ**
**ಭಾರತದಿಂದ ಹೊಂಟ ಹೋಗಿರಿನ್ನಾ**
**ಇಲ್ಲದಿದ್ದರೆ ಬೀಳತಾವ ನಿಮ್ಮ ಹೆಣಾ**
**ಕವಿ ಶಿವಲಿಂಗ ಹೇಳತಾನ**
**ಹೋಗಿರಿ ನಿಮ್ಮ ಗೂಡಿಗಿನ್ನಾ॥**

ಮತ್ತೊಂದು ಲಾವಣಿಯಲ್ಲಿ–

**ಸುತ್ತಮುತ್ತ ನಡದೈತಿ**
**ನಮ್ಮ ದೇಶದ ತಿಳುವಳಿಕಿ**
**ಹುಟ್ಟಿದಾರ ಅಲ್ಲಲ್ಲಿ ಬಂಟರಾ**
**ಪಿರಂಗ್ಯಾರಿಗೆ ಬಂತೋ ಕಂಟಕಾ**

ಎಂದು ಅಂದಿನ ಕಾಲದ ಪರಿಸ್ಥಿತಿಯನ್ನು ವಿವರಿಸಿದ್ದಾನೆ. ಬ್ರಿಟೀಶರ ಅವಗುಣಗಳನ್ನು ಹೇಳುವುದರ ಜೊತೆ ಮಹಾತ್ಮಾ ಗಾಂಧೀಜಿಯವರ ಚರಿತ್ರಾಂಶಗಳನ್ನು ತಿಳಿಸುವ ಹಾಡುಗಳನ್ನು ಹೇಳಿ ಜನರಿಗೆ ತಿಳಿಸುವ ಪ್ರಯತ್ನ ಮಾಡುತ್ತಿದ್ದ ಕವಿ.

**ದೇಶ ಉದ್ಧಾರ ಮಾಡಿದಂಥಾ**
**ಈಶ ರೂಪ ಮಹಾತ್ಮಾ ನಿನ್ನ**
**ದಾಸನಾಗಿ ಮಾಡುವೆನು ಸ್ತುತಿ**
**ಪ್ರಪಂಚದ ವಾಸನೆಯನೆಲ್ಲಾ**
**ದೂಷಿಸಿದ ಯತಿ ದೇವಾ**
**ನಿನ್ನ ಖಾಸ ವಾಸಸ್ಥಾನ, ಸಾಬರಮತಿ**

ಶಿವಲಿಂಗಕವಿ ಸ್ವಾತಂತ್ರ್ಯದ ತಿಳುವಳಿಕೆಯನ್ನು ಜನತೆಯಲ್ಲಿ ಮೂಡಿಸಲು ಲಾವಣಿಗಳನ್ನು ಬರೆದು ಹಾಡಿನ ಮೇಳಗಳಿಗೆ ಕೊಡುತ್ತಿದ್ದನು.

ಶಿವಲಿಂಗಕವಿ ೧೯೪೨ರಲ್ಲಿ ಚಲೇಜಾವ್ ಚಳುವಳಿ ಸಂದರ್ಭದಲ್ಲಿ ಭೂಗತರಾಗಿ ಕಾರ್ಯ ಮಾಡುತ್ತಿದ್ದರು. ಆಗ ಚನ್ನಪ್ಪ ವಾಲಿಯವರು ಪೋಲಿಸರಿಂದ ತಪ್ಪಿಸಿಕೊಂಡು ಸ್ತ್ರೀ ವೇಷಧರಿಸಿ ಶಿವಲಿಂಗಕವಿಗಳ ಮಠದಲ್ಲಿ

ಬಂದು ಉಳಿದುಕೊಂಡಿದ್ದರು. ಅವರ ಜೊತೆಯಲ್ಲಿ ಈ ಭಾಗದ ಸ್ವಾತಂತ್ರ್ಯ ಹೋರಾಟಗಾರರಾದ ಹೆಬ್ಬಾಳ ಹನುಮಂತಗೌಡ, ಕಿತ್ತೂರ ಬಸಪ್ಪ, ಅನ್ನಪ್ಪ ಸೌಂದತ್ತಿ, ಗಂಗವ್ವ ಎಡ್ರಾಂವಿ, ಚನ್ನಪ್ಪ ಉಗರಗೋಳ ಮೊದಲಾದವರು ಮಠದಲ್ಲಿಯೇ ಇರುತ್ತಿದ್ದರು. ಇವರೆಲ್ಲ ಮಠದಿಂದಲೇ ಸ್ವಾತಂತ್ರ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಈ ವಿಷಯ ಕೆಲವು ದುಷ್ಟ ಜನರಿಂದ ಪಿಎಸ್ಐ ವಾಂಡಕರ್ ಎನ್ನುವವನಿಗೆ ತಿಳಿದು ಈ ಮಠದೊಳಗಿನ ಎಲ್ಲ ಜನರ ಮೇಲೆ ವಾರಂಟ್ ತೆಗೆದು ಸೈನ್ಯ ಸಮೇತ ಮಠಕ್ಕೆ ಬರುತ್ತಾನೆ. ಶಿವಲಿಂಗಕವಿಗಳಿದ್ದ ಮಠಕ್ಕೆ ಬಂದು ಕವಿಗಳನ್ನೇ ಶಿವಲಿಂಗಕವಿ ಎಲ್ಲಿ ಎಂದು ಕೇಳುತ್ತಾನೆ. ಆಗ ಕವಿಗಳು ಅವನನ್ನು ನೋಡಿ "ಏನಾಗಬೇಕು? ನಾನೇ ಶಿವಲಿಂಗಕವಿ" ಎನ್ನುತ್ತಾರೆ. ಇವರ ಮುಖ ನೋಡಿದ ಪಿಎಸ್ಐ ವಾಂಡೇಕರನ ಪೌರುಷವೆಲ್ಲ ಇಳಿದು ಹೋಗುತ್ತದೆ. ಆ ಕ್ಷಣದಲ್ಲಿ ಶಿವಲಿಂಗ ಕವಿ ಆತನ ಮೇಲೊಂದು ಲಾವಣಿ ಬರೆದು ಮೇಳದವರಿಂದ ಹಾಡಿಸುತ್ತಾರೆ. ಆ ಪದ್ಯ ಕೇಳಿದ ವಾಂಡಕರ್ ಶಿವಲಿಂಗ ಕವಿಗಳಿಗೆ ಶರಣಾಗಿ ೧೦೧ ರೂ. ದಕ್ಷಿಣೆ ಇಟ್ಟು ತಪ್ಪಾಯಿತ್ತೆಂದು ಕ್ಷಮೆ ಕೇಳಿ ಸೈನ್ಯ ಸಮೇತ ಮರಳಿ ಹೋಗುತ್ತಾನೆ. ಅಂತಹ ಅದ್ಭುತವಾದ ಕವಿತ್ವ ಶಕ್ತಿ ಶಿವಲಿಂಗ ಕವಿಗಳಲ್ಲಿತ್ತು.

ಒಟ್ಟಾರೆ, ಹುಲಕಂದ ಗ್ರಾಮದ ಲಾವಣಿಕಾರರು–ಲಾವಣಿ ಹಾಡುಗಾರರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತುಂಬ ನಿರ್ಣಾಯಕ ಪಾತ್ರವನ್ನು ಆಡಿರುವುದು ಇಂದು ಇತಿಹಾಸವಾಗಿದೆ. ಇತಿಹಾಸದ ಅವಲೋಕನ ವರ್ತಮಾನದ ನವೀಕರಣ ಆಗಬೇಕು. ಈ ಹಿನ್ನೆಲೆಯಲ್ಲಿ ಅವರ ಹೋರಾಟದ ಕ್ಷಣಗಳನ್ನು ನೆನಪಿಸಿಕೊಳ್ಳುವುದು ತುಂಬ ಅಗತ್ಯ. ಇಂದಿನ ಪೀಳಿಗೆ ಇದನ್ನೆಲ್ಲ ಓದಿ ದೇಶಭಕ್ತಿ–ರಾಷ್ಟ್ರಪ್ರೇಮ ಅಳವಡಿಸಿಕೊಳ್ಳುವಂತಾಗಲಿ ಎಂಬುದೇ ನಮ್ಮ ಆಶಯ.

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ<br>ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |